ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 34
೨೨ ಜೂನ್ ೧೯೫೮
*
ಪುಟ ೧೦ ಬೆಲೆ: ೧೩ ನಯೇ ಪೈಸೆ

ಬಂದರು ಕೆಲಸಗಾರರ ಹೋರಾಟ ಮುರಿಯಲು ದಬ್ಬಾಳಿಕೆ

ಜೂನ್ ತಾ. 16ರಂದು ಕಲ್ಕತ್ತ, ಬೊಂಬಾಯಿ, ಮದ್ರಾಸು, ಕೊಚ್ಚಿ ಮುಂತಾದ ದೇಶದ ಮುಖ್ಯ ಬಂದರಗಳಲ್ಲಿ ಲಕ್ಷಾಂತರ ಕೆಲಸಗಾರರ ಮುಷ್ಕರ ಆರಂಭವಾಯಿತು. ಆದಾಗಿ ಕೆಲವೇ ಘಂಟೆಗಳಲ್ಲಿ ಮದ್ರಾಸು ಬಂದರದ ಬಳಿ ಬಂದೂಕು ಪ್ರೇಮಿ ಪೋಲೀಸು ಪಡೆ ಕೆಲಸಗಾರರ ಮೇಲೆ ಗೋಳಿ ಚಲಾಯಿಸಿತು. ಆರು ಮಂದಿ ಹತರಾದರು. ಅವರಲ್ಲಿ ಒಬ್ಬ ಬರೀ 12 ವರ್ಷದ ಹುಡುಗ! ಅನೇಕರು ಗಾಯಗೊಂಡರು. ಆದರಿಂದ ನೆತ್ತರಿನ ನೀರಡಿಕೆ ತಣಿಯದ ಸಶಸ್ತ್ರ ದಳ ಲಾಥಿ ಪ್ರಹಾರ ನಡೆಸಿತು. ನೂರೈವತ್ತಕ್ಕಿಂತ ಹೆಚ್ಚು ಜನರಿಗೆ ಜಖಂ ಆಯಿತು. ಕಲ್ಕತ್ತದಲ್ಲೂ ಮದ್ರಾಸಿನಲ್ಲೂ ಕಾರ್ಮಿಕ ನಾಯಕರ ಮತ್ತು ಅನೇಕ ಕೆಲಸಗಾರರ ಬಂಧನವಾಗಿದೆ. ಸೈನಿಕ ಹಾಗೂ ನಾವಿಕ ದಳಗಳನ್ನೂ ರಾಷ್ಟ್ರೀಯ ಸ್ವಯಂಸೇವಕ ದಳವನ್ನೂ ಮುಷ್ಕರ ಮುರಿಯುವುದಕ್ಕೆ ಉಪಯೋಗಿಸಲಾಗುತ್ತಿದೆ. ಮುಷ್ಕರ ಹೂಡಿರುವ ಕೆಲಸಗಾರರನ್ನು ಸದೆಬಡಿಯಲು ಸರಕಾರದ ಬತ್ತಳಿಕೆಯಲ್ಲಿರುವ ಅಸ್ತ್ರಗಳೆಲ್ಲ ಪ್ರಯೋಗಿಸಲ್ಪಡುತ್ತಿವೆ. ಆದರೆ ಕೆಲಸಗಾರರು ದಬ್ಬಾಳಿಕೆಗೆ ಎದೆಕೊಟ್ಟು, ಧೈರ್ಯದಿಂದ ಹೋರಾಟ ಮುಂದೆ ನಡೆಸುತ್ತಿದ್ದಾರೆ.

ಬಂದರ ಕೆಲಸಗಾರರ ಸವಲತ್ತುಗಳನ್ನು ಕುರಿತು ಕಳೆದ ವರ್ಷ ಸಪ್ಟಂಬರ ತಿಂಗಳಲ್ಲಿ ಸರಕಾರಕ್ಕೆ ಸಮರ್ಪಿಸಲ್ಪಟ್ಟಿದ್ದ ವಿಶೇಷಾಧಿಕಾರಿಯ ವರದಿಯ ಬಗ್ಗೆ ಈ ತನಕ ಕ್ರಮ ವಹಿಸದಿರುವುದು ಮುಷ್ಕರಕ್ಕೆ ಕಾರಣ. ವರದಿ ದೊರೆತು ಒಂದೆರಡು ತಿಂಗಳುಗಳೊಳಗೆ ಯೋಗ್ಯ ತೀರ್ಮಾನ ಮಾಡುವುದಾಗಿ ಸರಕಾರ ಮಾತು ಕೊಟ್ಟಿತ್ತು. ಆದರೆ ಅದರಂತೆ ನಡೆದುಕೊಳ್ಳಲಿಲ್ಲ. ಈ ವರ್ಷ ಫೆಬ್ರುವರಿಯಲ್ಲಿ ಕಾರ್ಮಿಕ ಸಂಘದ ನಾಯಕರು ಒತ್ತಾಯ ಮಾಡಿದಾಗ ಮತ್ತೆ ಒಂದೆರಡು ತಿಂಗಳುಗಳಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ ಸರಕಾರ ಭರವಸೆ ಕೊಟ್ಟಿತ್ತು. ಅದೂ ನೆರವೇರಲಿಲ್ಲ. ಮೇ ತಿಂಗಳಲ್ಲಿ ಮತ್ತೆ ಸರಕಾರವನ್ನು ಬೇಡಿಕೊಂಡಾಗ, ಜುಲಾಯಿ ತಿಂಗಳಲ್ಲಿ ವಿಚಾರ ಮಾಡೋಣ, ಅದಕ್ಕೊಂದು ಸಮ್ಮೇಳನ ಕರೆಯೋಣ, ಎಂದೆಲ್ಲ ಹಾರಿಸುವ ಮಾತು ಹೊರಟಿತು. ವಿಶೇಷಾಧಿಕಾರಿಯ ಶಿಫಾರಸುಗಳಲ್ಲಿ ಮುಖ್ಯವಾದ ವೇತನ, ಪ್ರಾವಿಡೆಂಟ್ ಫಂಡ್ ಹಾಗೂ ಗ್ರ್ಯಾಚ್ಯುಟಿಗಳ ಬಗ್ಗೆಯಾದರೂ ಕೂಡಲೆ ತೀರ್ಮಾನ ಆಗಬೇಕೆಂದು ಕಾರ್ಮಿಕ ಸಂಘದ ವಕ್ತಾರರು ಕೇಳಿಕೊಂಡುದಕ್ಕೆ ಸರಕಾರ ನಕಾರದ ಉತ್ತರ ಕೊಟ್ಟಿತು. ಸರಕಾರದ ಈ ಕಾಲಹರಣ ಮತ್ತು ನ್ಯಾಯ ನಿರಾಕರಣೆಯ ಹಠಮಾರಿ ಧೋರಣೆಯಿಂದಾಗಿ ಮುಷ್ಕರ ಅನಿವಾರ್ಯವಾಯಿತು.

ಮುಷ್ಕರವಲ್ಲದೆ ಬೇರೆ ದಾರಿ ಇಲ್ಲದಂತೆ ಮಾಡಿ, ದೇಶದ ಜೀವಾಳದಂತಿರುವ ಉದ್ಯಮವೊಂದರಲ್ಲಿ ತಾಟಸ್ಥ್ಯವುಂಟಾಗುವ ಗಂಭೀರ ಸ್ಥಿತಿಯನ್ನು ಸೃಷ್ಟಿಸಿರುವುದು ಸರಕಾರ. ಅಂಥ ಸರಕಾರ ಕೆಲಸಗಾರರಿಗೆ ದೇಶಪ್ರೇಮದ ಉಪದೇಶ ಮಾಡುತ್ತದೆ. ಕೆಲಸಗಾರರ ನ್ಯಾಯವಾದ ಕೇಳಿಕೆಗಳನ್ನು ಒಪ್ಪುವುದರ ಬದಲು, ಮುಷ್ಕರ ಮುರಿಯಲು ವಿಶೇಷಾಧಿಕಾರಗಳನ್ನು ಉಪಯೋಗಿಸುತ್ತದೆ; ಸೈನಿಕ ಮತ್ತು ನಾವಿಕ ದಳಗಳನ್ನು ಬಂದರಗಳಲ್ಲಿ ಕೆಲಸಕ್ಕೆ ಹಚ್ಚುತ್ತದೆ; ರಾಷ್ಟ್ರೀಯ ಸ್ವಯಂಸೇವಕರನ್ನು ಕರಿಗಾಲುಗಳಾಗಿ ವಿನಿಯೋಗಿಸುತ್ತದೆ; ಮುಷ್ಕರ ಹೂಡಿರುವ ಕೆಲಸಗಾರರ ಮೇಲೆ ಲಂಗುಲಗಾಮಿಲ್ಲದೆ ದಬ್ಬಾಳಿಕೆ ನಡೆಸುತ್ತದೆ! ನೂರಾರು ಮಂದಿಯ ತಲೆಯೊಡೆದು, ಆರು ಮಂದಿಯ ಜೀವ ಬಲಿ

ಕರಿಗಾಲಿಗಳನ್ನು ತರುವ, ಸೈನ್ಯಪಡೆ ಬಳಸುವ, ನೀತಿ ಅಳಿಯಲಿ

ತೆಗೆದುಗೊಂಡು, ಮಂತ್ರಿ ಎಸ್. ಕೆ. ಪಾಟೀಲರು "ಅತ್ಯಂತ ವಿಷಾದ" ವ್ಯಕ್ತಪಡಿಸಿ ಮೊಸಳೆ ಕಣ್ಣೀರು ಸುರಿಸುತ್ತಾರೆ. ಕೆಲಸಗಾರರಿಗೆ ಅಹಿಂಸಾಮಂತ್ರ ಬೋಧಿಸುತ್ತಾರೆ!

ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ನೋಡಿದರೆ, ಮುಷ್ಕರವು ಸಂಪೂರ್ಣ ಯಶಸ್ವಿಯಾಗಿ ಆರಂಭವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಕಲ್ಕತ್ತದಲ್ಲಿ "ಬಂದರು ಕೆಲಸವೆ ನಡೆಯದೆ ಸ್ತಬ್ಧವಾಗಿತ್ತು....ಹಡಗುಗಳಿಗೆ ಸಾಮಾನುಗಳನ್ನು ತುಂಬುವ ಹಾಗೂ ಹಡಗುಗಳಿಂದ ಸಾಮಾನುಗಳನ್ನು ಇಳಿಸುವ ಕಾರ್ಯವೇನೂ ಇಂದು ಜರುಗಲಿಲ್ಲ. ಮುಷ್ಕರವು ಇಂದು ಸಂಪೂರ್ಣವಾಗಿತ್ತು." ಬೊಂಬಾಯಿಯಲ್ಲಿ ಎಲ್ಲ ಬಂದರುಗಳ ಮುಷ್ಕರ ಸಂಪೂರ್ಣವಾಗಿದೆ. ಮದ್ರಾಸಿನಲ್ಲಿ ಕೆಲಸಗಾರರೆಲ್ಲ ಮುಷ್ಕರ ಹೂಡಿರುತ್ತಾರೆ. ಕೆಲಸಗಾರರೊಳಗೆ ಒಡಕು ಉಂಟಾಗಬಹುದೆಂದು ಆಶಿಸಿದ್ದ ಅಧಿಕಾರಿಗಳು ಕಾತರಗೊಂಡಿದ್ದಾರೆ. ಕಲ್ಕತ್ತದಲ್ಲಿ ರಾಷ್ಟ್ರೀಯ ಸ್ವಯಂಸೇವಕ ದಳದವರನ್ನು, ಬೊಂಬಾಯಿಯಲ್ಲಿ ಸೈನಿಕ ಮತ್ತು ನಾವಿಕ ಪಡೆಗಳನ್ನು ಬಂದರದ ಕೆಲಸಕ್ಕೆ ಹಚ್ಚಲಾಗಿದೆ. ಮದ್ರಾಸಿನಲ್ಲಿ ದೂರದ ಊರುಗಳಿಂದ ಹೊಸ ಕೆಲಸಗಾರರನ್ನು ಹೆಕ್ಕಿ ತಂದು, ತಡೆಯುವವರನ್ನು ಕೊಂದು, ಕೆಲಸ ಮಾಡಿಸಲಾಗುತ್ತದೆ.

ದಬ್ಬಾಳಿಕೆಯಿಂದ ಮುಷ್ಕರವನ್ನು ಮುರಿಯಬಹುದೆಂಬ ಸರಕಾರದ ಆಶೆ ಮಣ್ಣುಗೂಡುವುದರಲ್ಲಿ ಅನುಮಾನವಿಲ್ಲ. ಈಗಾಗಲೆ ಗಂಭೀರವಾಗಿರುವ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವುದರ ಬದಲು, ಕೆಲಸಗಾರರ ಕೇಳಿಕೆಗಳನ್ನು ಸರಕಾರ ಒಪ್ಪುವುದು ವಿಹಿತ. ಕೆಲವು ಜೀವಗಳನ್ನು ಬಲಿ ತೆಗೆದುಕೊಳ್ಳಬಹುದು, ಹಲವರ ಕೈಕಾಲು ಮುರಿದುಹಾಕಬಹುದು, ಅನೇಕರನ್ನು ಸೆರೆಮನೆಗೆ ತಳ್ಳಬಹುದು ಆದರೆ ಅದರಿಂದ ಸಮಸ್ಯೆ ಬಗೆಹರಿಯಲಾರದು; ಪರಿಸ್ಥಿತಿ ಸುಧಾರಿಸಲಾರದು; ದೇಶಕ್ಕೆ ಹಿತವಾಗದು. ಶ್ರಮಜೀವಿಗಳ ಮತ್ತು ಜನಸಾಮಾನ್ಯರ ಕೇಳಿಕೆಗಳನ್ನೆಲ್ಲ ನಿರಾಕರಿಸಿ ಹೋರಾಟಗಳನ್ನೆಲ್ಲ ಮರ್ದನದಿಂದ ಅಣಗಿಸುವ ಸರಕಾರದ ನೀತಿ ರಾಷ್ಟ್ರ ಘಾತುಕವಾದುದು. ಅದು ಕೊನೆಗಾಣಬೇಕು. ಇದು ಎಲ್ಲರ ಒಕ್ಕೊರಲಿನ ಬೇಡಿಕೆಯಾಗಿದೆ.

ಕೆಲಸಗಾರರ ಕೇಳಿಕೆಗಳನ್ನು ನ್ಯಾಯೀಕರಿಸಿ, ಮುಷ್ಕರಕ್ಕೆ ಬೆಂಬಲ ನೀಡಿ, ದೇಶದ ಕೇಂದ್ರ ಕಾರ್ಮಿಕ ಸಂಘಟನೆಗಳೆಲ್ಲ ಪ್ರಸ್ತಾವನೆ ಹೊರಡಿಸಿವೆ. ಐ. ಎನ್. ಟಿ. ಯು. ಸಿ.ಯ ನಾಯಕರು ಕೂಡಾ ಸರಕಾರದ ಧೋರಣೆಯನ್ನು ಖಂಡಿಸಿದ್ದಾರೆ. ಮದ್ರಾಸಿನ ಗೋಳೀಬಾರಿನ ಬಗ್ಗೆ ಬಹಿರಂಗ ವಿಚಾರಣೆ ನಡೆಸಬೇಕೆಂದು ಎ. ಐ. ಟಿ. ಯು. ಸಿ. ನಾಯಕರಾದ ಪಿ. ರಾಮಮೂರ್ತಿ ಮತ್ತು ಎಂ. ಕಲ್ಯಾಣಸುಂದರಂ ಸರಕಾರವನ್ನು ಕೇಳಿಕೊಂಡಿದ್ದಾರೆ. ಮದ್ರಾಸು ಸರಕಾರವು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರೊಬ್ಬರ ಮೂಲಕ ವಿಚಾರಣೆ ನಡೆಸುವ ಆಜ್ಞೆ ಹೊರಡಿಸಿದೆ. ಇಂಥ ವಿಚಾರಣೆಯು ಜನರ ಕಣ್ಣಿಗೆ ಮಣ್ಣೆರಚುವ ತಂತ್ರವೆಂದು ಹೇಳಬೇಕಾಗುತ್ತದೆ.

ಸರಕಾರವೂ ಅಧಿಕಾರಿಗಳೂ ಅದೆಷ್ಟೇ ರೊಚ್ಚಿಗೆಬ್ಬಿಸಿದರೂ ಕೆಲಸಗಾರರು ಐಕ್ಯತೆಯಿಂದ, ಶಾಂತವಾಗಿ, ಮುಷ್ಕರವನ್ನು ಮುನ್ನಡೆಸುತ್ತಿದ್ದಾರೆ. ಕಲ್ಕತ್ತ, ಬೊಂಬಯಿ, ಮದ್ರಾಸು ರೇವುಗಳ ಸಾಮಾನು ತುಂಬುವ ಮತ್ತು ಇಳಿಸುವ ಕೆಲಸ ಸಂಪೂರ್ಣ ಸ್ತಬ್ಧವಾಗಿಯೇ ಉಳಿದಿದೆ. ಮದ್ರಾಸಿನ ಗೋಳೀಬಾರನ್ನು ಖಂಡಿಸಿ ನಗರದಲ್ಲಿ ಒಂದು ದಿನದ ಸಂಪೂರ್ಣ ಹರತಾಳ ಯಶಸ್ವಿಯಾಗಿ ನಡೆದಿದೆ. ಹರತಾಳವು ಶಾಂತವಾಗಿ ನಡೆದರೂ ಅಲ್ಲಲ್ಲಿ ಅನೇಕ ಮಂದಿಯ ದಸ್ತಗಿರಿ ನಡೆದಿದೆ. ಮದ್ರಾಸನ ಚಿಲ್ಲರೆ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಒಂದು ಹೇಳಿಕೆ ಹೊರಡಿಸಿ "ನಿರ್ದೋಷಿಗಳಾದ ಆರು ಜನರ ಮರಣದ ಬಗ್ಗೆ ವಿಷಾದ ವ್ಯಕ್ತಪಡಿಸಲು ಹರತಾಳದಲ್ಲಿ ಭಾಗವಹಿಸಬೇಕು" ಎಂದು ಅಂಗಡಿಗಾರರನ್ನು ಕೇಳಿಕೊಂಡಿದ್ದಾರೆ.

ಲಂಡನಿನಲ್ಲಿ ಕೇಂದ್ರ ಕಛೇರಿಯಿರುವ ಅಂತರ್‌ರಾಷ್ಟ್ರೀಯ ಸಾರಿಗೆ ಕೆಲಸಗಾರರ ಪರಿಷತ್ತಿನ ಕಾರ್ಯದರ್ಶಿಯವರು ಮುಷ್ಕರಕ್ಕೆ ಸಹಾನುಭೂತಿ ವ್ಯಕ್ತಪಡಿಸಿ, ಗೋಳಿಬಾರನ್ನು ಖಂಡಿಸಿ, ನೆಹರೂರವರು ಈ ವಿವಾದದ ತೀರ್ಮಾನಕ್ಕೆ ಸ್ವತಃ ಪ್ರಯತ್ನಿಸಬೇಕೆಂದು ಕೇಳಿಕೊಂಡು ತಂತಿ ಕಳುಹಿಸಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ರಾಷ್ಟ್ರೀಯ ಸಮಿತಿಯು ಒಂದು ಹೇಳಿಕೆ ಹೊರಡಿಸಿ, ಕೆಲಸಗಾರರ ಕನಿಷ್ಠ ಕೇಳಿಕೆಗಳನ್ನು ಮಾನ್ಯ ಮಾಡಿ ಮುಷ್ಕರವನ್ನು ಕೊನೆಗಾಣಿಸಬೇಕೆಂದು ಸರಕಾರವನ್ನು ಕೇಳಿಕೊಂಡಿದೆ. ಸಮಿತಿಯು ಮದ್ರಾಸಿನ ಗೋಳೀಬಾರನ್ನು ಖಂಡಿಸಿ ಮೃತರ ಕುಟುಂಬಗಳಿಗೆ ಸಂತಾಪವನ್ನು ವ್ಯಕ್ತಪಡಿಸಿದೆ.

ಬಂದರ ಕೆಲಸಗಾರರ ಹೋರಾಟಕ್ಕೆ ದೇಶದ ಆದ್ಯಂತ ಸಂಘಟಿತ ಕಾರ್ಮಿಕ ವರ್ಗದ, ಜನತೆಯ, ಬೆಂಬಲವಿದೆ. ಅವರ ಹೋರಾಟ ಜಯಹೊಂದುವುದೆಂದು ಹಾರೈಸೋಣ.

● ಗೋಳಿಬಾರಿನ ಬಗ್ಗೆ ಬಹಿರಂಗ ವಿಚಾರಣೆ ನಡೆಯಲಿ.

● ಮಡಿದವರ ಕುಟುಂಬಗಳಿಗೂ ಘಾಯಗೊಂಡವರಿಗೂ ಪರಿಹಾರ ದೊರೆಯಲಿ.

● ಮುಷ್ಕರ ಮುರಿಯುವುದಕ್ಕೆ ಸಶಸ್ತ್ರ ಪಡೆಗಳನ್ನು ರಾಷ್ಟ್ರೀಯ ಸ್ವಯಂಸೇವಕ ದಳವನ್ನು, "ಕರಿಕಾಲು"ಗಳನ್ನಾಗಿ ಉಪಯೋಗಿಸುವುದು ಕೊನೆಗಾಣಲಿ.

● ಚಾಧುರಿ ಸಮಿತಿಯು ಶಿಫಾರಸುಗಳನ್ನು ಅಂಗೀಕರಿಸಿ, ಕೆಲಸಗಾರರ ಕೇಳಿಕೆಗಳನ್ನು ಮಾನ್ಯ ಮಾಡಲಿ.

ಸಂಪಾದಕೀಯ

ಸರಕಾರದ ದಬ್ಬಾಳಿಕೆ ಮತ್ತು ಕಾರ್ಮಿಕ ಹೋರಾಟಗಳು

"ಕೈಗಾರಿಕಾ ಸಂಬಂಧಗಳನ್ನು ವ್ಯವಸ್ಥಿತಗೊಳಿಸಲು ನಾವು ಕ್ರಮವೊಂದನ್ನು ಇರಿಸಿಕೊಂಡಿದ್ದೇವೆ ಮತ್ತು ಅದು ಸಾಕಷ್ಟು ಪರಿಣಾಮಕಾರಿಯಾಗಿ ಕಾರ್ಯಗತವಾಗಿದೆಯೆಂದು ನಾನು ಭಾವಿಸುತ್ತೇನೆ" ಎಂದು ಕೇಂದ್ರ ಕಾರ್ಮಿಕ ಸಚಿವ ನಂದಾರವರು ಸರಕಾರದ ಕಾರ್ಮಿಕ ನೀತಿಯನ್ನು ಕುರಿತು ತಿಳಿಸಿದ್ದಾರೆ. ಇತ್ತೀಚಿಗೆ ನೈನಿತಾಲ್‌ನಲ್ಲಿ ನಡೆದ ಲೇಬರ್ ಸಮ್ಮೇಳನದ ನಂತರ ಅವರು ಈ ರೀತಿ ಹೇಳಿದ್ದಾರೆ. ಕೈಗಾರಿಕಾ ಸಂಬಂಧದಲ್ಲಿ ಹಿಂದಿದ್ದ ಪರಿಸ್ಥಿತಿಗಿಂತ ಇಂದು ಸುಧಾರಿತವಾಗಿದೆ ಎಂದು ಹೇಳಬಹುದು. ಆದರೆ ಕಾರ್ಮಿಕರ ನ್ಯಾಯವಾದ ಹೋರಾಟಗಳ ಬಗ್ಗೆ, ನ್ಯಾಯವಾದ ಬೇಡಿಕೆಗಳ ಬಗ್ಗೆ ಸರಕಾರದ ನೀತಿ ಏನೂ ಬದಲಾಗಿಲ್ಲ ಎಂದು ಹೇಳಬಹುದು.

ಕಾರ್ಮಿಕರು ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳಲು ಹೋರಾಟ ನಡೆಸಿದಾಗಲೆಲ್ಲ, ಹೋರಾಟವನ್ನು ಮುರಿಯಲು ಸರಕಾರ ತನ್ನ ದಬ್ಬಾಳಿಕೆಯ ಅಸ್ತ್ರವನ್ನು ಪ್ರಯೋಗಿಸುತ್ತದೆ. ಅಷ್ಟೇ ಅಲ್ಲ ಮುಷ್ಕರ ನಡೆದಾಗ ಅವನ್ನು ಮುರಿಯಲು ಹೊರಗಿನಿಂದ ಕರಿಗಾಲಿಗಳನ್ನು ತರಲಾಗುತ್ತಿದೆ. ಸೈನಿಕ ಪಡೆಯವರನ್ನು ಕರೆಸಲಾಗುತ್ತಿದೆ. ಸರಕಾರದ ಈ ನೀತಿಗೆ ಅನೇಕ ನಿದರ್ಶನಗಳು ಇವೆ.

ಕೇಂದ್ರ ಸರಕಾರದ ನೌಕರರು, ಅಂಚೆ-ತಂತಿ ನೌಕರರು ದ್ವಿತೀಯ ಪೇ ಕಮಿಷನ್ನಿಗಾಗಿ, ತುಟ್ಟಿಭತ್ಯ ಮತ್ತು ಸಂಬಳದಲ್ಲಿ ಹೆಚ್ಚಳಕ್ಕಾಗಿ ಹೋರಾಟ ನಡೆಸಲು ಮುಂದೆ ಬಂದಾಗ ಸರಕಾರ ಅದನ್ನು ಮುರಿಯಲು ತುರ್ತು ಆಜ್ಞೆಯೊಂದನ್ನು ಹೊರಡಿಸಿದ್ದು ಎಲ್ಲರಿಗೂ ತಿಳಿದಿದೆ. ಮುಷ್ಕರ ನಡೆದಲ್ಲಿ ಅದನ್ನು ಮುರಿಯಲು ಸೈನಿಕ ಪಡೆಯ ಸಹಾಯ ಬೇಡುವುದಾಗಿ ಎಚ್ಚರಿಕೆ ಇತ್ತಿದ್ದು ತಿಳಿದಿದೆ.

ಇತ್ತೀಚಿಗೆ ತಾತಾಉಕ್ಕಿನ ಕಾರ್ಖಾನೆ ನೌಕರರು ನಡೆಸಿದ ಮುಷ್ಕರ ಹೋರಾಟದ ಮೇಲೆ ಸರಕಾರ ತೀವ್ರವಾದ ದಬ್ಬಾಳಿಕೆ ನಡೆಸಿತು. ಪೋಲೀಸರು ಮಾತ್ರವೇ ಅಲ್ಲದೆ ತನ್ನ ಶಕ್ತಿ ಪ್ರದರ್ಶಿಸಲು ಸೈನ್ಯ ಪಡೆಯನ್ನು ಕರೆಸಿತು, ಗೋಲಿಬಾರು ನಡೆಸಿತು. ಕರ್ಫ್ಯೂ ಆಜ್ಞೆ ಜಾರಿಗೆ ತಂದಿತು.

ಇಂದು ನಡೆಯುತ್ತಿರುವ ಬಂದರು ನೌಕರರ ಹೋರಾಟವನ್ನು ಮುರಿಯಲು ಸರಕಾರ ಪಣ ತೊಟ್ಟಿದೆ. ಕಾರ್ಮಿಕರು ಐಕ್ಯತೆಯನ್ನು ಮುರಿಯಲು, ಅವರ ಸಂಘಟನಾ ಶಕ್ತಿಯನ್ನು ಮುರಿಯಲು ಸರಕಾರ ಸೇನಾ ಪಡೆಯನ್ನು ಮತ್ತು ನೌಕಾದಳವನ್ನು ಬಂದರುಗಳಲ್ಲಿ ಕೆಲಸ ಮಾಡಲು ನಿಯಮಿಸಿದೆ. ಹೊರಗಿನಿಂದ ಕರಿಗಾಲಿಗಳನ್ನು ತಂದು ಕೆಲಸ ಮಾಡಿಸಲು ನೋಡುತ್ತಿದೆ. ಕೆಲಸಗಾರರು ಶಾಂತ ರೀತಿಯಲ್ಲಿ ಪಿಕೆಟಿಂಗ್ ನಡೆಸಿದಲ್ಲಿ, ಅವರ ಮೇಲೆ ಗೋಲಿಬಾರು ಮಾಡಲಾಗಿದೆ.

ನಮ್ಮ ರಾಜ್ಯದಲ್ಲಿ ಕೆಲ ತಿಂಗಳ ಹಿಂದೆ ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರು ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ನಡೆಸಿದಾಗ, ಅವರ ಮೇಲೆ ಗೋಲೀಬಾರು ನಡೆಸಿ ತೀವ್ರ ದಬ್ಬಾಳಿಕೆ ನಡೆಸಿದುದು ಮರೆಯುವಂತಿಲ್ಲ. ಇಂದಿಗೂ ನೂರಾರು ಮಂದಿ ನೌಕರರ ಮೇಲೆ ಪೋಲೀಸು ಕೇಸುಗಳು ಹಾಕಲಾಗಿದೆ.

ಮೇಲೆ ತಿಳಿಸಿರುವ ನಿದರ್ಶನಗಳು ಕೆಲವು ಮಾತ್ರ. ಎಷ್ಟೇ ಸಣ್ಣ ಹೋರಾಟವಾಗಲಿ ಸರಕಾರ ತನ್ನ ದಬ್ಬಾಳಿಕೆ ಅಸ್ತ್ರವನ್ನು ಕಾರ್ಮಿಕರ ಮೇಲೆ ಪ್ರಯೋಗಿಸುತ್ತದೆ. ಟ್ರೇಡ್ ಯೂನಿಯನ್ ನಾಯಕರುಗಳ ಮೇಲೆ ಕೇಸುಗಳನ್ನು ಹಾಕಿ ಬಂಧಿಸಲಾಗುತ್ತಿದೆ.

ಅದೇ ಸಮಯದಲ್ಲಿ, ಮಾಲಿಕ ವರ್ಗದವರು ಎಲ್ಲ ಕಾನೂನು ಕಾಯಿದೆಗಳನ್ನು ಮೀರಿದರೂ ಸಹ ಅವರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳಲು ಹಿಂಜರಿಯುತ್ತದೆ. ಕೈಗಾರಿಕಾ ಪಂಚಾಯಿತ್ತಿಯ ಅವಾರ್ಡುಗಳನ್ನು ಕಾರ್ಯಗತ ಮಾಡದಿರುವ ನಿದರ್ಶನಗಳು ಅನೇಕವಿವೆ. ಸರಕಾರವು ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲು ಅವಕಾಶವಿದ್ದರೂ ಸಹ ತೆಗೆದುಕೊಳ್ಳುವುದಿಲ್ಲ. ಇದು ಸರಕಾರದ ಕಾರ್ಮಿಕ ವಿರೋಧಿ ನೀತಿಯ ಮೂಲಭೂತ ನಿಯಮವಾಗಿದೆ ಎಂಬುದನ್ನು ವ್ಯಕ್ತಗೊಳಿತ್ತದೆ.

ದ್ವಿತೀಯ ಪಂಚವಾರ್ಷಿಕ ಯೋಜನೆ ಕಾರ್ಯಗತವಾಗಬೇಕು. ಕೈಗಾರಿಕೋತ್ಪನ್ನ ಹೆಚ್ಚಬೇಕು, ಕಾರ್ಮಿಕರು ಅಧಿಕ ಉತ್ಪಾದನೆಯನ್ನು ಮಾಡಬೇಕು ಎಂದು ಹೇಳುವ ಸರಕಾರ, ಕೆಲಸಗಾರರು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ, ಉತ್ತಮ ಜೀವನ ಮಟ್ಟಕ್ಕಾಗಿ ಹೋರಾಟ ನಡೆಸುವಾಗ ಅವರಮೇಲೆ ಗದಾಪ್ರಹಾರ ನಡೆಸುವುದರಿಂದ ಉದ್ದಿಶ್ಯ ಪೂರಯಿಸಲಾಗುವುದಿಲ್ಲ. ಸರಕಾರದ ಇದೇ ನೀತಿ ಮುಂದುವರಿದಲ್ಲಿ ಕಾರ್ಮಿಕರ ನಡುವೆ ಹೆಚ್ಚಿನ ಅತೃಪ್ತಿಮಾಡಿ, ಕೈಗಾರಿಕೆಯಲ್ಲಿ ಅಶಾಂತಿ ಹೆಚ್ಚುವುದೇ ಹೊರತಾಗಿ ಕೈಗಾರಿಕಾಪ್ರಗತಿ ಏರ್ಪಡುವುದಿಲ್ಲ.

ಸರಕಾರದ ಈ ನೀತಿಯನ್ನು ಬದಲಿಸುವಂತೆ ಮಾಡಲು, ದಬ್ಬಾಳಿಕೆಯ ನೀತಿಯನ್ನು ಎದುರಿಸಲು ಕಾರ್ಮಿಕರು ತಮ್ಮ ಐಕ್ಯತೆಯನ್ನು ಬಲಪಡಿಸಿಕೊಳ್ಳಬೇಕಾಗಿದೆ. ಐಕ್ಯತೆ ಉಂಟಾದಲ್ಲಿ ಮಾತ್ರ ಸರಕಾರದ ಧಾಳಿಯನ್ನು ಹಿಮ್ಮೆಟ್ಟಿಸಲು ಸಾಧ್ಯ

ಶ್ರೀ ವಿ. ಚಕ್ಕರೈ ಚೆಟ್ಟಿಯಾರ್‌ರವರ ನಿಧನ



ನಮ್ಮ ದೇಶದ ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಅತ್ಯಂತ ಹಿರಿಯರೂ ಮತ್ತು ನಾಯಕರೂ ಆಗಿದ್ದ ಶ್ರೀ ವಿ. ಚಕ್ಕರೈಚೆಟ್ಟಿಯಾರ್‌ರವರು ತಮ್ಮ 79ನೆಯ ವಯಸ್ಸಿನಲ್ಲಿ ಜೂನ್ 14ರಂದು ಪ್ರಾತಃಕಾಲ 9-45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

1880ರ ಡಿಸೆಂಬರ್ ಮಾಸದಲ್ಲಿ ಜನಿಸಿದ ಚೆಟ್ಟಿಯಾರ್‌ರವರು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವೀಧರರಾದರು. ನಂತರ ನ್ಯಾಯಾಂಗವನ್ನು ಮದರಾಸ್ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಟ್ರೇಡ್ ಯೂನಿಯನ್ ಚಳವಳಿಯನ್ನು ಆರಂಭಿಸುವುದಕ್ಕೆ ಮುನ್ನ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದರು.

ಭಾರತದಲ್ಲಿ ಟ್ರೇಡ್ ಯೂನಿಯನ್ ಚಳವಳಿಯನ್ನು ಆರಂಭಿಸಿದವರಲ್ಲಿ ಇವರು ಮೊದಲಿಗರಾಗಿದ್ದರು ಎಂದು ಹೇಳಬಹುದು. ಮದರಾಸಿನಲ್ಲಿ ಬಿನ್ನಿ ಮತ್ತು ಕರ್ನಾಟಕ ಮಿಲ್ಸ್ ಕೆಲಸಗಾರರನ್ನು ಸಂಘಟಿಸಿ ಮದರಾಸ್ ಲೇಬರ್ ಯೂನಿಯನ್ ಅನ್ನು ಅವರು ಸ್ಥಾಪಿಸಿದರು. ಭಾರತದಲ್ಲಿ ಮೊಟ್ಟ ಮೊದಲು ರಿಜಿಸ್ಟರ್ ಆದ ಕಾರ್ಮಿಕ ಸಂಘ ಇದಾಗಿತ್ತು. 1920ರ ವರ್ಷಗಳಲ್ಲಿ ಈ ಸಂಘ ಆರಂಭವಾಗಿ ಕೆಲಸ ಮಾಡುತ್ತಿತ್ತು.

ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಚಕ್ಕರೈಚೆಟ್ಟಿಯಾರ್‌ರವರು ಮಾಡಿರುವ ತ್ಯಾಗ ಅಪಾರವಾದುದಾಗಿದೆ. ಕಾರ್ಮಿಕರ ನಡುವೆ ಜಾಗೃತಿಯನ್ನುಂಟು ಮಾಡಿ, ಸಂಘಟನೆಯ ಅಗತ್ಯತೆಯನ್ನು ಅವರಲ್ಲಿ ಒಡಮೂಡಿಸಲು ಚೆಟ್ಟಿಯಾರರು ತಮ್ಮ ಜೀವಮಾನವಿಡೀ ಶ್ರಮಿಸಿದ್ದಾರೆ. ಅನೇಕ ಟ್ರೇಡ್ ಯೂನಿಯನ್ ಸಂಘಟನೆಗಳ ನೇತೃತ್ವ ವಹಿಸಿದ್ದ ಚೆಟ್ಟಿಯಾರ್‌ರವರು ಟ್ರೇಡ್ ಯೂನಿಯನ್ ಚಳವಳಿಯ ಮುನ್ನಡೆಗಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ.

ಚಕ್ಕರೈಚೆಟ್ಟಿಯಾರ್‌ರವರು ಸುಮಾರು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಅಲ್ಲದೆ ಅನೇಕ ವರ್ಷಗಳ ಕಾಲ ತಮಿಳುನಾಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು.

ಚೆಟ್ಟಿಯಾರ್‌ರವರು ಮದ್ರಾಸ್ ನಗರ ಮುನಿಸಿಪಲ್ ಕಾರ್ಪೋರೇಷನ್ನಿನ ಮೇಯರ್ ಆಗಿ ನಾಗರಿಕರ ಸೇವೆ ಸಲ್ಲಿಸಿದರು. ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರೂ ಆಗಿದ್ದರು.

ಚೆಟ್ಟಿಯಾರ್‌ರವರ ನಿಧನದಿಂದಾಗಿ ಟ್ರೇಡ್ ಯೂನಿಯನ್ ಚಳವಳಿಗೆ, ಕಾರ್ಮಿಕ ವೃಂದಕ್ಕೆ ಅಪಾರವಾದ ನಷ್ಟವಾಗಿದೆ. ಅವರು ನಿಧನರಾಗಿದ್ದರೂ, ಶ್ರಮಜೀವಿ ಜನತೆಗೆ ಅವರು ಇತ್ತಿರುವ ಕಾಣಿಕೆ ಅಮರವಾಗಿರುವುದರಲ್ಲಿ ಸಂಶಯವಿಲ್ಲ.

ಟ್ರೇಡ್ ಯೂನಿಯನ್ ಚಳವಳಿಯ ನಾಯಕಮಣಿಯಾಗಿದ್ದ ಚಕ್ಕರೈಚೆಟ್ಟಿಯಾರರ ನಿಧನಕ್ಕಾಗಿ 'ಜನಶಕ್ತಿ' ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಶ್ರೀ ಸಿ. ವಿ. ರಾಮನ್‌ರಿಗೆ ಲೆನಿನ್ ಶಾಂತಿ ಪಾರಿತೋಷಕ

ಭಾರತದ ಖ್ಯಾತ ವಿಜ್ಞಾನಿ ಡಾ|| ಸಿ. ವಿ. ರಾಮನ್ ಅವರಿಗೆ 1956 ಅಂತರ್ರಾಷ್ಟ್ರೀಯ ಲೆನಿನ್ ಶಾಂತಿ ಪಾರಿತೋಷಕವನ್ನು ಅರ್ಪಿಸುವ ಸಮಾರಂಭವು ಕ್ರೆಮ್ಲಿನ್‌ನಲ್ಲಿ ಇತ್ತೀಚಿಗೆ ನಡೆಯಿತು

ಭಾರದ "ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್" ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ಸಿ. ವಿ. ರಾಮನ್‌ರವರಿಗೆ "ಶಾಂತಿ ಭದ್ರತೆ ಹಾಗೂ ಶಾಂತಿ ಸಂರಕ್ಷಣೆ"ಗೆ ಸಲ್ಲಿಸಿರುವ ಅಪಾರ ಸೇವೆಗೆ ಸಲ್ಲಿಸುವ ಗೌರವವಾಗಿ ಈ ಪಾರಿತೋಷಕ ಸಮಿತಿಯ ಅಧ್ಯಕ್ಷರಾದ ಡಿಮಿಟ್ರಿ ಸ್ಕೋಬೆಲ್ಟಿನ್ ಅವರು ಅರ್ಪಿಸಿದರು. ಅರ್ಪಣೆಯ ಬಳಿಕ ಶ್ರೀ ರಾಮನ್‌ರು ಒಂದು ಸುವರ್ಣ ಪದಕದಿಂದ ಅಲಂಕೃತರಾಗಿದ್ದರಲ್ಲದೆ 'ಲೆನಿನ್ ಪ್ರೈಜ್ ಲಾರಿಯೆಟ್' ಪದವಿಯನ್ನು ಸ್ವೀಕರಿಸಿದರು.

ಶ್ರೀ ರಾಮನ್‌ರು ಈ ಗೌರವಕ್ಕೆ ಕೃತಜ್ಞತೆ ಸಮರ್ಪಿಸುತ್ತ "ನನಗೆ ಸಂದ ಗೌರವ ಭಾರತಕ್ಕೇ ಸಂದ ಗೌರವ" ಎಂದು ಹೇಳಿದರು.

ಶೃಂಗ ಸಮ್ಮೇಲನಕ್ಕೆ ಅಮೆರಿಕವು ಒಪ್ಪದಿರಲು ಕಾರಣವೇನು?

ಸೋವಿಯತ್ ಒಕ್ಕೂಟವು ಶೃಂಗ ಸಮ್ಮೇಳಕ್ಕೆ ಪೂರ್ವಭಾವಿಯಾಗಿ ಮಾತುಕತೆ ನಡೆಸಲು ಒಪ್ಪಿಕೊಂಡ ಮೇಲೆ, ಅಮೆರಿಕದ ರಾಜ್ಯಶಾಖೆಯು ಈ ಮಾರ್ಚ್ ತಿಂಗಳಲ್ಲಿ ವಿದೇಶಗಳಲ್ಲಿರುವ ತನ್ನ ರಾಯಭಾರ ಕಚೇರಿಗಳಿಗೆ ವಿಶಿಷ್ಟ ರೂಪದ ಆದೇಶಗಳ ವಿವರಗಳನ್ನು ನೀಡುವ ಪರಿಪತ್ರಗಳನ್ನು ಕಳಿಸಿಕೊಟ್ಟಿದೆ. ಡಲ್ಲೆಸ್‌ರವರ ಹಸ್ತಾಕ್ಷರ ಪಡೆದಿರುವ ಈ ಗುಪ್ತ ಪತ್ರವು, ಶೃಂಗ ಸಮ್ಮೇಲನವನ್ನೂ ಮತ್ತು ಅದರ ಪರಿಣಾಮಗಳನ್ನೂ ವಿಧ್ವಂಸಗೊಳಿಸುವ ಅಮೆರಿಕನ್ ಕಾರ್ಯನೀತಿಯನ್ನು ಮಂಡಿಸಿ, ಸಮರ್ಥಿಸುತ್ತದೆ—ಎಂದು 'ಎಡಿಎನ್' (ADN) ವಾರ್ತಾ ಸಂಸ್ಥೆ ತಿಳಿಸಿದೆ.

ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಬೇಡಿಕೆಗಳು ಯೂರೋಪಿನಲ್ಲಿ ಇತ್ತೀಚೆಗೆ ಬೆಳೆದಿವೆ. ರಾಷ್ಟ್ರೀಯ ಸ್ವಾಭಿಮಾನದ ಪ್ರಭಾವದಿಂದ ಹಳೆಯ ಖಂಡದ ನಾಯಕರು ಪ್ರಾಚ್ಯದೊಡನೆ ಒಡಂಬಡಿಕೆ ಮಾಡಿಕೊಳ್ಳಲು—ಪಾಶ್ಚಿಮಾತ್ಯ ನಾಗರಿಕತೆಯೆಲ್ಲದರ ಧ್ಯೇಯಗಳನ್ನು ತ್ಯಜಿಸಿ, ತಮ್ಮ ಸಂಕೀರ್ಣ ರಾಷ್ಟ್ರೀಯ ಹಿತಗಳನ್ನು ಕಾಪಾಡಿಕೊಳ್ಳಲು,—ಮನಸೋತಿದ್ದಾರೆ, ರಶಿಯದೊಡನೆ ಮಾತುಕತೆ ನಡೆಸಬೇಕೆಂದು ಅಮೆರಿಕವನ್ನು ಒತ್ತಾಯಪಡಿಸಲು ಹಲವರು ದೃಢಚಿತ್ತರಾಗಿದ್ದಾರೆ. ಇಂತಹ ಸಮಾಲೋಚನೆಗಳಿಂದ ಅಂತರರಾಷ್ಟ್ರೀಯ ವೈಮನಸ್ಯ ಪರಿಹಾರಕ್ಕೆ ಎಡೆಯುಂಟಾಗುವುದೆಂದೂ, ನೂತನ ಯುದ್ಧಾಪಾಯವು ಬಹುಮಟ್ಟಿಗೆ ತಗ್ಗುವುದೆಂದೂ, ಅವರ ಪೈಕಿ ಹಲವರ ಮನೋರಥವಾಗಿದೆ. ಈ ಸಂದರ್ಭದಲ್ಲಿ ಅಮೆರಿಕನ್ ನೀತಿಯು ಯೂರೋಪಿನವರ ಮನಃಸ್ಥಿತಿಯನ್ನು ಅನುಸರಿಸಿಕೊಂಡು ಹೋಗುವುದಸಾಧ್ಯ—ಎಂದು ಈ ರಹಸ್ಯಾದೇಶಗಳಲ್ಲಿ ತಿಳಿಸಲಾಗಿದೆ.

ಈ ಮನೋಭಾವನೆಯನ್ನು—(ಶೃಂಗ ಸಮ್ಮೇಲನ ನಡೆಸಬೇಕೆಂಬುದನ್ನು)—ನೇರವಾಗಿ ತಿರಸ್ಕರಿಸುವುದೇ ಅತ್ಯಂತ ಸರಳ ಮಾರ್ಗ. ಆದರೆ ಅಮೆರಿಕದ ಸಂಯುಕ್ತ ರಾಜ್ಯಗಳು ತನ್ನ ಯೂರೋಪಿಯನ್ ಸಹಭಾಗಿಗಳ ಅಭಿಪ್ರಾಯವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ. ಆದುದರಿಂದಲೇ, ಶೃಂಗ ಸಮ್ಮೇಲನವನ್ನು ಕೂಡಿಸಬೇಕೆನ್ನುವ ಪ್ರಸ್ತಾಪಗಳ ಚರ್ಚೆಗೆ ಒಪ್ಪಬೇಕಾಯಿತು—ಎಂದು ಈ ಗುಪ್ತ ಪತ್ರದಲ್ಲಿ ತಿಳಿಸಲಾಗಿದೆ.

ಕಾಲಾವಕಾಶ ಪಡೆಯಲು ಮತ್ತು ಹಲವರು ಐರೋಪ್ಯ ನಾಯಕರಿಗೆ ಇರುವ ಆತ್ಮಾಭಿಮಾನ ಪ್ರೇರಿತ ರಾಜ-ಉದ್ದೇಶವನ್ನು ಜಯಿಸಲು, ಕಾಲಯಾಪನೆಯ ಉಪಾಯವನ್ನು ಅನುಸರಿಸುವುದು ಅವಶ್ಯಕವೆಂದು ರಾಜ್ಯ ಶಾಖೆಯು ನಂಬುತ್ತದೆ.

ಆದರೂ ಕೂಡ, ಶೃಂಗ ಸಮ್ಮೇಲನವು ನಡೆಯಲೇ ಬೇಕಾದ ಪಕ್ಷದಲ್ಲಿ ಅವಶ್ಯಕವಾದ ಚತುರೋಪಾಯಗಳ ಮುಖಗಳನ್ನು ಈ ಆದೇಶಗಳ ದ್ವಿತೀಯ ಘಟ್ಟವು ವಿವರಿಸುತ್ತದೆ.

ಈ ಉಪಾಯಾನುಗುಣವಾಗಿ, ಸಮ್ಮೇಲನದಲ್ಲಿ ಅಮೆರಿಕನ್ ನಿಯೋಗವು ತನ್ನ ಐರೋಪ್ಯ ಭಾಗಸ್ಥರಿಗೆ,—ರಶಿಯನ್ನರೊಡನೆ ನಡೆಸಲಾಗುವ ಮಾತುಕತೆಗಳನ್ನು "ಬಲುಮೆ ಸ್ಥಾನಗಳಿಂದ" ನಡೆಸದಿದ್ದ ಪಕ್ಷದಲ್ಲಿ, ಅವು ನಿರರ್ಥಕವೆಂದು ತಿಳಿಸಲು" ಸರ್ವ ಪ್ರಯತ್ನವನ್ನು ಮಾಡಲೇ ಬೇಕು. ಆದುದರಿಂದಲೇ, ಉದಾಹರಣೆಗೆ, ಪೂರ್ವ ಯೂರೋಪಿನ ದೇಶಗಳಲ್ಲಿನ ರಾಜಕೀಯ ಪರಿಸ್ಥಿತಿ, "ಮುಕ್ತ ಚುನಾವಣೆಗಳ" ಮೂಲಕ ಜರ್ಮನಿಯ ಪುನರೇಕೀಕರಣ, ಇಂತಹ ಸಮಸ್ಯೆಗಳ ಬಗ್ಗೆ ಎಲ್ಲ ಸಂದರ್ಭಗಳಲ್ಲಿಯೂ ರಶಿಯನ್ನರು ಚರ್ಚೆ ನಡೆಸುವಂತೆ ಪ್ರಯತ್ನಗಳನ್ನು ಮಾಡಲೇ ಬೇಕು—ಎಂದು ಆ ಸಂದೇಶದಲ್ಲಿ ತಿಳಿಸಲಾಗಿದೆ. ಈ ಸಂದರ್ಭದಲ್ಲಿ, ಜರ್ಮನಿಯ ಪುನರೇಕೀಕರಣದ ಬೇಡಿಕೆಯು, ಪ್ರಸ್ತುತ ಸಮಯದಲ್ಲಿ ಈ ಸಮಸ್ಯೆ ಬಗೆಹರಿಯಬೇಕೆಂಬ ಬಗ್ಗೆ ಅಮೆರಿಕದ ಆಸಕ್ತಿಯನ್ನೆಷ್ಟು ಮಾತ್ರವೂ ಸೂಚಿಸುತ್ತಿಲ್ಲವೆಂದು ರಾಜ್ಯ ಶಾಖೆಯು ಬಹಿರಂಗವಾಗಿ ತಿಳಿಸುತ್ತದೆ.

ನಿರಾಯುಧೀಕರಣ ಅಥವ ಭದ್ರತಾ ರಕ್ಷಣೆಯ ಸಾಧಾರಣ ಜಟಿಲಸ್ಥಿತಿಯ ನಿರ್ದಿಷ್ಟ ಸಮಸ್ಯೆಗಳನ್ನು ಚರ್ಚಿಸಿದಾಗ,—ಅಮೆರಿಕನ್ ಸರಕಾರವು ಸೈನಿಕ ಕೂಟಗಳನ್ನು ತ್ಯಜಿಸ ಬಯಸದೆಂಬ, ಪ್ರಪಂಚದ ಯಾವ ಭಾಗದಲ್ಲಿಯೇ ಆದರೂ ತನ್ನ ಯುದ್ಧಸ್ಥಾವರಗಳು ಬಿಟ್ಟುಬಿಡದೆಂಬ ಪ್ರಮೇಯದಿಂದಲೇ, ಅಮೆರಿಕನ್ ದೌತ್ಯ ನೀತಿಯು ಮುಂದುವರಿಯುವುದೆಂದು ಈ ಪರಿಪತ್ರವು ತಿಳಿಸುತ್ತದೆ ಅದೇ ರೀತಿಯಾಗಿ, ತುರ್ತಿನ ಪರಿಸ್ಥಿತಿಯ ವೇಳೆಯಲ್ಲಿ ಆಧುನಿಕಾಸ್ತ್ರಗಳ ಬಳಕೆಯನ್ನು ನಿಷೇಧಿಸುವುದಕ್ಕೆ ಸಂಬಂಧವಿರಬಹುದಾಂತಹ ಯಾವ ಚರ್ಯೆಯನ್ನೂ ಅದು ಕೈಗೊಳ್ಳದು.

ಯೂರೋಪಿನಲ್ಲಿ ಅಪಾಯಕರ ಮನೋಭಾವನೆಗಳನ್ನು ವಿಫಲಗೊಳಿಸುವ ಪರಿಣಾಮಕಾರೀ ಸಾಧನಗಳ ವಿವರಣೆಗೆ ಹೆಚ್ಚು ಗಮನ ನೀಡುವುದು ಈಗ ಅವಶ್ಯವಾಗಿದೆಯೆಂದು ಈ ಪರಿಪತ್ರವು ತಿಳಿಸುತ್ತಾ, ಈ ಅಪಾಯಕರ ಮನಸ್ಥಿತಿಗಳಲ್ಲಿ ಅದು, ಪರಮಾಣು ಅಸ್ತ್ರಗಳ ನಿಷೇಧದ ಸಲುವಾಗಿ ಬೆಳೆಯುತ್ತಿರುವ ಚಳವಳಿಯನ್ನೂ ಸೇರಿಸಿಕೊಂಡಿದೆ.

ಮಧ್ಯ ಯೂರೋಪಿನಲ್ಲಿ ಬೀಜಾಣು ರಹಿತ ವಲಯವಿರಬೇಕೆಂಬ ಪೋಲಿಷ್ ಯೋಜನೆಯ ಕುರಿತು ಈ ಆದೇಶದಲ್ಲಿ ಹೆಚ್ಚು ಗಮನವನ್ನು ಕೊಡಲಾಗಿದೆ. ಶೃಂಗ ಸಮ್ಮೇಲನದಲ್ಲಿ ಈ ಯೋಜನೆಯನ್ನು ಚರ್ಚಿಸುವುದು ತೀರಾ ಅನಪೇಕ್ಷಣೀಯವೆಂದು ಈ ಆದೇಶವು ತಿಳಿಸುತ್ತದೆ.

ಅಮೆರಿಕನ್ ರಾಯಭಾರಿಗಳು ತಾವು ನಿಯುಕ್ತರಾಗಿರುವ ದೇಶಗಳ ಸರಕಾರದೊಂದಿಗೂ ಮತ್ತು ರಾಜಕೀಯ ನಾಯಕರೊಂದಿಗೂ ಶೃಂಗ ಸಮ್ಮೇಲನದ ಕುರಿತು ಮಾತುಕತೆ ನಡೆಸುವಾಗ, ಈ ಆದೇಶವನ್ನು ಅಕ್ಷರಶಃ ಪಾಲಿಸಬೇಕೆಂದು, ರಾಜ್ಯ ಶಾಖೆಯು ಶಿಫಾರಸು ಮಾಡುತ್ತದೆ.

"ತಾಸ್"

ಶೃಂಗ ಸಮ್ಮೇಲನಕ್ಕೆ ಭಾರತದ ಅಧ್ಯಕ್ಷತೆ

ರಷ್ಯನ್ ಸರಕಾರದ ಒಪ್ಪಿಗೆ

ರಷ್ಯದ ಪ್ರಧಾನ ಮಂತ್ರಿ ಶ್ರೀ ನಿಕಿಟಾ ಖ್ರುಶ್ಚೋವ್‌ರವರು ಬ್ರಿಟನಿನ ಶಾಂತಿ ಯೋಧರ ತಂಡವೊಂದರೊಡನೆ ಮಾತನಾಡುತ್ತ "ಸೋವಿಯತ್ ಸಂಘವು ಜಿನೀವಾದಲ್ಲಿ ನಡೆಯಲಿರುವ ನಿರಾಯುಧೀಕರಣದ ಮಾತುಕತೆಗಳಲ್ಲಿ ಭಾಗವಹಿಸಲು ತುಂಬಾ ಸಂತೋಷದಿಂದ ಸಿದ್ಧವಾಗಿದೆ" ಎಂದು ಹೇಳಿದರು. ಹೀಗೆಂದು ಆ ತಂಡದ ವಕ್ತಾರರೊಬ್ಬರು ಮಾಸ್ಕೋವಿನಲ್ಲಿ ತಿಳುಹಿಸಿದ್ದಾರೆ.

ಶೃಂಗ ಸಮ್ಮೇಲನ ಇಷ್ಟರಲ್ಲೇ ಆರಂಭವಾಗಬಹುದೆಂದೂ ಸೋವಿಯತ್ ಪ್ರಧಾನಿಯ ನಿರೀಕ್ಷೆಯಾಗಿದೆ.

ಪಶ್ಚಿಮ ರಾಷ್ಟ್ರಗಳೊಂದಿಗೆ ಸೋವಿಯತ್ ಸಂಘವು ಮಾತುಕತೆಗೇಗೆ ಸಿದ್ಧವಾಗಿದೆಯಷ್ಟೇ ಅಲ್ಲ, ಇದಕ್ಕೆ ತಟಸ್ಥ ರಾಷ್ಟ್ರವೊಂದು ಅಧ್ಯಕ್ಷತೆ ವಹಿಸಬೇಕೆಂದೂ ಅವರ ಅಭಿಪ್ರಾಯವಾಗಿದೆ. ಭಾರತ ಅಥವಾ ಸ್ವೀಡನ್ ಇಲ್ಲವೇ ಎರಡು ರಾಷ್ಟ್ರಗಳೂ ಅಧ್ಯಕ್ಷತೆವಹಿಸಿದರೆ ನಮ್ಮ ಸಮ್ಮತಿ ಇದೆಯೆಂದೂ ಖ್ರುಶ್ಚೋವ್ ಹೇಳಿದರು.

ಇಂಗ್ಲೆಂಡ್ - ಫ್ರಾನ್ಸ್‌ಗಳಲ್ಲಿ—

ಕಮ್ಯೂನಿಸ್ಟ್ ಸದಸ್ಯತ್ವ ಬೆಳೆಯುತ್ತಿದೆ

● ಬ್ರಿಟನಿನಲ್ಲಿ ಕಮ್ಯೂನಿಸ್ಟ್‌ಪಕ್ಷದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಚಳವಳದ ಪರಿಣಾಮವಾಗಿ ಏಪ್ರಿಲ್ ೧ರಿಂದ ಈವರೆಗೆ (ಜೂನ್ ೧ರ ವರೆಗೆ) 450 ಜನ ಸದಸ್ಯರನ್ನು ಸೇರಿಸಲಾಗಿದೆ. ದೊಡ್ಡ ಜಿಲ್ಲಾ ಪ್ರದೇಶಗಳಲ್ಲಿ ಹೊಸತಾಗಿ ಸದಸ್ಯರಾಗಿರುವವರ ಸಂಖ್ಯೆ ಇದರಲ್ಲಿ ಇನ್ನೂ ಸೇರಿಲ್ಲ. ಈ ಚಳವಳದಿಂದ ಸ್ಕಾಟ್ಲೆಂಡ್ ಒಂದರಲ್ಲೇ 138 ಜನ ಸದಸ್ಯರು ಪಕ್ಷಕ್ಕೆ ದೊರೆತಿದ್ದಾರೆ.

ಜೂನ್ ತಿಂಗಳ ಕೊನೆಗೆ ಈ ಚಳವಳ ಮುಕ್ತಾಯವಾಗುವುದು.

● ಫ್ರಾನ್ಸ್‌ನಲ್ಲಿ ಫ್ರೆಂಚ್ ಕಮ್ಯೂನಿಸ್ಟ್ ಪಕ್ಷವು ಕೌನ್ಸಿಲ್ ಆಫ್ ರಿಪಬ್ಲಿಕ್‌ಗೆ ನಡೆದ ಚುನಾವಣೆಗಳಲ್ಲಿ ಕಳೆದ ಸಲಕ್ಕಿಂತ ಎರಡು ಸ್ಥಳಗಳನ್ನು ಹೆಚ್ಚು ಸಂಪಾದಿಸಿದೆ. ಈಗ ಅವರು ಪಡೆದಿರುವ ಸಂಖ್ಯೆ ೧೫.

ಡಿಗಾಲೆಯವರ ಸೋಷಿಯಲ್ ರಿಪಬ್ಲಿಕನ್ಸ್ ಪಕ್ಷವು ಈ ಸಲ ಹಿಂದಿಗಿಂತ ಎರಡು ಸ್ಥಳಗಳನ್ನು ಕಳೆದುಕೊಂಡು ಒಟ್ಟು ೨೦ ಸ್ಥಳಗಳನ್ನು ಪಡೆದಿದೆ.

ಈಗ ಅಲ್ಲಿರುವ ಸದಸ್ಯ ಬಲ ಹೀಗಿದೆ: ಸ್ವತಂತ್ರರು ೩೭, ಸೋಷಿಯಲಿಸ್ಟರು ೧೯, ಪೂಪ್ಯುಲರ್ ರಿಪಬ್ಲಿಕನ್ ಮೂವ್‌ಮೆಂಟ್ ೧೩, ಮತ್ತು ಸೋಷಿಯಲಿಸ್ಟ್ ರೆಡಿಕಲ್ಸ್ ೧೮.

ಕಮ್ಯೂನಿಸ್ಟ್ ಪಕ್ಷವು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿರದ ಚುನಾವಣಾ ಪದ್ಧತಿ ಪಾರ್ಲಿಮೆಂಟಿನ ರಾಜಕೀಯ, ಕಮ್ಯೂನಿಸ್ಟ್ ಸದಸ್ಯರನ್ನು ಹೊರದೂಡಲು ನಡೆಸಿದ ಸಾಹಸಗಳು ಹೀಗೆ ಎಷ್ಟೋ ವಿರೋಧಗಳು ಬಂದರೂ ಹೆಚ್ಚು ಶಕ್ತಿ ಸಂಪಾದಿಸುತ್ತಿದೆ. ಪ್ರಜಾಪ್ರಭುತ್ವವಾದೀ ಶಕ್ತಿಗಳ ಬೆಂಬಲ ಕಮ್ಯೂನಿಸ್ಟ್ ಪಕ್ಷಕ್ಕೆ ಬೇಕಾದಷ್ಟಿದೆ.

ರಾಷ್ಟ್ರಾಧ್ಯಕ್ಷರ ಎರಡು ತುರ್ತು ಆಜ್ಞೆಗಳು—

ಬೆನಾರಸ್ ಹಿಂದೂ ವಿಶ್ವವಿದ್ಯಾ ನಿಲಯದ ಆಡಳಿತೆ

ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಆಡಳಿತೆಯನ್ನು ಕುರಿತು, ಮತ್ತು ಕಾರ್ಯನಿರತ ಪತ್ರಿಕೋದ್ಯಮಿಗಳ ವೇತನ ನಿರ್ಧಾರದ ಬಗ್ಗೆ ರಾಷ್ಟ್ರಾಧ್ಯಕ್ಷರು ಕಳೆದ ಭಾನುವಾರ ಎರಡು ತುರ್ತು ಆಜ್ಞೆಗಳನ್ನು ಹೊರಡಿಸಿದ್ದಾರೆ.

ಬೆನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ತಲೆದೋರಿರುವ ಅರಾಜಕತೆ, ವಿದ್ಯಾಭ್ಯಾಸ ಮತ್ತು ಶಿಕ್ಷಣದ ಮಟ್ಟದಲ್ಲಿ ತಲೆದೋರಿರುವ ಅವನತಿ, ಲಂಚಮುಷು ವಸ್ತುಗಳು ಇತ್ಯಾದಿಗಳನ್ನು ತಡೆಗಟ್ಟಲು ಮತ್ತು ಅದನ್ನು ಪರಿಶೀಲಿಸಲು ರಾಷ್ಟ್ರಾಧ್ಯಕ್ಷರು ತುರ್ತು ಆಜ್ಞೆ ಹೊರಡಿಸಿದ್ದಾರೆ.

ಬೆನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಆಡಳಿತೆಯ ಬಗ್ಗೆ ತನಿಖೆ ನಡೆಸಲು ಡಾ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಇವರ ನೇತೃತ್ವದಲ್ಲಿ ರಚಿತವಾಗಿದ್ದ ಸಮಿತಿಯ ವರದಿಯ ಮೇಲೆ ರಾಷ್ಟ್ರಾಧ್ಯಕ್ಷರ ಆಜ್ಞೆ ಹೊರಟಿದೆ. ಈ ಆಜ್ಞೆಯಿಂದಾಗಿ ಈವರೆಗೆ ಇದ್ದ ಸರ್ವಶಕ್ತ ಆಡಳಿತ ಸಂಸ್ಥೆಯಾಗಿದ್ದ ಯೂನಿವರ್ಸಿಟಿ ಕೋರ್ಟನ್ನು ಕೇವಲ ಸಲಹಾಸಮಿತಿಯಾಗಿ ಮಾಡಿ, ಅದರ ಮೇಲೆ ರಾಷ್ಟ್ರಾಧ್ಯಕ್ಷರಿಂದ ನೇಮಿತವಾದ ಎಕ್ಸಿಕ್ಯೂಟಿವ್ ಕೌನ್ಸಿಲ್ ಅಧಿಕಾರ ನಡೆಸುತ್ತದೆ.

ರಾಷ್ಟ್ರಾಧ್ಯಕ್ಷರಿಂದ ತುರ್ತು ಆಜ್ಞೆ ಹೊರಡಿಸಲ್ಪಟ್ಟ ಪರಿಸ್ಥಿತಿಯನ್ನು ಪಡೆಗೆ ದಲು ಬಿಟ್ಟದ್ದು ನಿಜವಾಗಿ ಶೋಚನೀಯ ವಿಷಯವಾಗಿದೆ. ದೇಶದಲ್ಲಿ ಹೊಸರಾಷ

(೬ನೇ ಪುಟ ನೋಡಿ)

ಸ್ಟಾಕ್ ಹೋಂ ಅಧಿವೇಶನಕ್ಕೆ ಬೆಂಬಲ ನೀಡಿ

ಬೆಂಗಳೂರು ಶಾಂತಿ ಸಮಿತಿಯ ಕರೆ

ತಾ. 13-6-58ರ ಸಂಜೆ ಆರು ಗಂಟೆ. ಸ್ಥಳ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರ. ಮೋಡ ಮುಸುಕಿ ಮಳೆ ಬರುವ ಲಕ್ಷಣಗಳು ತುಂಬಿದ್ದರೂ, ಶಾಂತಿಯನ್ನು ಕದಡುವಂತೆ-ಗುಡುಗು ಅಬ್ಬರಿಸುತ್ತಿದ್ದರೂ ಜನ ಬರುತ್ತಲೇ ಇದ್ದರು.

ಹೌದು, ಯುದ್ಧದ ಕಾರ್ಮೋಡಗಳು ಮುಸುಕಿ ಅಣು ಹಾಗೂ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಆರ್ಭಟ ಪ್ರಪಂಚದಲ್ಲಿ ಭೀತಿದಾಯಕವಾಗಿ ಮೊಳಗುತ್ತಿದ್ದರೂ ಶಾಂತಿಗಾಗಿ, ವಿಶ್ವಶಾಂತಿಗಾಗಿ ಜನ ಒಂದೆಡೆ ಸೇರುತ್ತಿದ್ದಾರೆ, ಶಾಂತಿ-ಬೇಕೆಂದು ಸಾರುತ್ತಿದ್ದಾರೆ. ಅದಕ್ಕಾಗಿ ಮಹಾ ಸಮ್ಮೇಲನವೊಂದು ಮುಂದಿನ ತಿಂಗಳು ಸ್ಟಾಕ್ ಹೋಮ್‌ನಲ್ಲಿ ಸೇರಲಿದೆ.

ಈ ಸ್ಟಾಕ್ ಹೋಮ್ ಮಹಾಸಮ್ಮೇಲನಕ್ಕೆ ಬೆಂಬಲ ನೀಡುವ ಸಭೆಯೊಂದು ಬೆಂಗಳೂರಿನ ಶಾಂತಿ ಸಮಿತಿಯ ವತಿಯಿಂದ ಕನ್ನಡ ಸಾಹಿತ್ಯ ಪರಿಷನ್ಮಂದಿರದ ಆವರಣದಲ್ಲಿ ನಡೆಯಿತು.

ರಂಗಮಂಚದ ತೆರೆಯ ಮೇಲೆ ಸ್ವಿಸ್ ಕಲಾವಿದರೊಬ್ಬರು ಬರೆದಿದ್ದ ಚಿತ್ರವೊಂದು ತೂಗುಹಾಕಲ್ಪಟ್ಟಿತ್ತು. "ಭೀತಿಗ್ರಸ್ತ ತಾಯಿ, ಅವಳ ಕಂಕುಳಲ್ಲಿ ಕುಳಿತು ಪಿಳಿ ಪಿಳಿ ಕಣ್ಣುಬಿಡುವ ಎಳೆಮಗು. ಪ್ರಪಂಚದಲ್ಲಿ ನನಗೆ ರಕ್ಷಣೆಯೇ ಇಲ್ಲ, ನನ್ನ ರಕ್ಷಿಸಿ, ಶಾಂತಿ ಸ್ಥಾಪಿಸಿ" ಎನ್ನುವಂತಿದ್ದ ಆ ಚಿತ್ರ ಹೃದಯ ಸ್ಪರ್ಶಿಯಾಗಿತ್ತು.

ಪ್ರಪಂಚಕ್ಕೆ ಶಾಂತಿ-ಸುಖಗಳನ್ನು ಕೇಳಿಕೊಳ್ಳುವ ಮಕ್ಕಳ ಪ್ರಾರ್ಥನೆಯಾದ ಬಳಿಕ ಕಲಾಮಂದಿರದ ಪ್ರಾಧ್ಯಾಪಕರಾದ ಶ್ರೀ ಎ. ಎನ್. ಸುಬ್ಬರಾಯರು ಪರಿಚಯಾತ್ಮಕ ಭಾಷಣಮಾಡಿ ಇಂದಿನ ಯುದ್ಧ ಭೀತ ವಾತಾವರಣದಲ್ಲಿ ಮನುಷ್ಯ ಬದುಕುವುದೇ ಕಷ್ಟವಾಗಿದೆಯೆಂದು ಹೇಳಿ ಭಾಷಣಕಾರರ, ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು.

ಶ್ರೀ ಟಿ. ಕೆ. ದಯಾಳುರವರು ಅಧ್ಯಕ್ಷತೆ-ವಹಿಸಿದ್ದರು.

ಯುದ್ಧ ಯಾಕೆ ಬೇಡ?

ಈ ಸಭೆಯ ಆರಂಭೋತ್ಸವನ್ನು ರೈತ ಮುಖಂಡ ಶ್ರೀ ಬಿ. ವಿ. ಕಕ್ಕಿಲ್ಲಾಯ ಅವರು ನಡೆಸಿದರು.

ಪ್ರಪಂಚದ ಇಂದಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ಶ್ರೀ ಕಕ್ಕಿಲ್ಲಾಯರವರು—

ಜನರಿಗೆ ಯಾವ ಕಾಲದಲ್ಲೂ ಯುದ್ಧ ಬೇಕಾಗಿಲ್ಲ. ಅದನ್ನೆಂದೂ ಅವರು ಅಪೇಕ್ಷಿಸಿಲ್ಲ. ಯಾಕೆಂದರೆ ಯುದ್ಧದಿಂದ ತಮ್ಮ ಬದುಕು ಕಷ್ಟವಾಗುತ್ತದೆ, ತಮ್ಮ ಅಭಿವೃದ್ಧಿ ಆಗಲಾರದು ಎಂದು ಅವರಿಗೆ ಗೊತ್ತು. ಯುದ್ಧ ಆಗದಿದ್ದರೆ ಒಳ್ಳೆಯದು ಎಂಬ ಅಪೇಕ್ಷೆಯಷ್ಟೆ ಅಲ್ಲ.

ಯಾಕೆಂದರೆ ಇನ್ನು ಮೇಲೆ ನಡೆಯ ಬಹುದಾದ ಯುದ್ಧದಿಂದ ತಲೆ ಮಾರುಗಳ ವರೆಗೆ ಮಾನವ ಕುಲವೇ ಕೆಟ್ಟು ಹೋಗುತ್ತದೆ. ಎಲ್ಲಿಯೋ ನಡೆದ ಆಸ್ಫೋಟನೆಗಳ ಪರಿಣಾಮ ಭಾರತದ ಮೇಲಾಗದು ಎಂದು ಹೇಳುವಂತಿಲ್ಲ. ಋತುಮಾನಗಳಿಗೆ ತಕ್ಕಂತೆ ದೇಶ ದೇಶಗಳನ್ನೇ ಬದಲಾಯಿಸುವ ಹಕ್ಕಿಗಳ ಮೇಲೆ ರೇಡಿಯೋ ಆಕ್ಟಿವ್ ಪರಿಣಾಮಗಳಾಗಿವೆ. ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಸುರಕ್ಷಿತವಾಗಿರುವುದು ಸಾಧ್ಯವಿಲ್ಲ. ಅಂತೆಯೇ ಶಾಂತಿ ಪ್ರಿಯರೆಲ್ಲ ಒಂದೆಡೆ ಸೇರಿ ಯುದ್ಧ ನಿಷೇಧಕ್ಕೆ ಒತ್ತಾಯ ಹಾಕಬೇಕಾಗಿದೆ.

ಬೆಂಬಲ ನೀಡಿ

ಕುಲ, ಧರ್ಮ, ಪಕ್ಷ, ದೇಶ, ರಾಷ್ಟ್ರ, ಆದರ್ಶಗಳು ಎಂಬ ಯಾವ ಭೇದವೂ ಇಲ್ಲದೆ ಎಲ್ಲರೂ ಇಂದು ಯುದ್ಧವನ್ನು ನಿಷೇಧಿಸಬೇಕಾಗಿದೆ. ರಾಷ್ಟ್ರಗಳಲ್ಲಿ ತಿಕ್ಕಾಟಗಳಿದ್ದರೆ ಸಂಧಾನದ ಮೂಲಕ ಬಗೆಹರಿಸಿಗೊಳ್ಳಲಿ. ಪಂಚಶೀಲ ತತ್ವವನ್ನು ಅನುಷ್ಠಾನಕ್ಕೆ ತರಲಿ. ನಮ್ಮ ದೇಶಕ್ಕಲ್ಲದಿದ್ದರೆ ಇನ್ನೊಂದು ದೇಶಕ್ಕಿರುವ ಅಣುಗಂಡಾತರವನ್ನು ಭಾರತೀಯ ಜನತೆ, ಸರಕಾರ ಶಾಂತಿ-ಸಮಿತಿಗಳು ತಪ್ಪಿಸಬೇಕಾಗಿದೆ. ಒಂದು ದೇಶಕ್ಕೆ ಅನುಕೂಲ, ಇನ್ನೊಂದು ದೇಶಕ್ಕೆ ಭಾಧಕವಾಗುವ ರೀತಿಯಲ್ಲಿ ಈ ಪ್ರಶ್ನೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಇಂಥ ವಿಷಯವನ್ನು ಪರಿಶೀಲಿಸಲಿರುವ ಸ್ಟಾಕ್ ಹೋಮ್ ಮಹಾಧಿವೇಶನಕ್ಕೆ ಮಹಾಜನತೆ ಬೆಂಬಲ ನೀಡಬೇಕು. ಆದಕ್ಕೆ ಬೆಂಬಲ ನೀಡಲು ಸೇರಿರುವ ನಿಮಗೆ ಸ್ವಾಗತ" ಎಂದು ಮುಗಿಸಿದರು.



ಸ್ವಿಸ್ ಕಲಾವಿದ ಹಾನ್ಸ್ ಅರ್ನಿ ಅವರು ಬರೆದ ಚಿತ್ರವಿದು. ಅಂತರರಾಷ್ಟ್ರೀಯ ಶಾಂತಿ ಸ್ಥಾಪನಾ ಅಂದೋಳನದಲ್ಲಿ ಅವರಿಗೆ ತುಂಬ ಆಸಕ್ತಿ. ಪ್ರಪಂಚ ಶಾಂತಿಗಾಗಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಳಸುವ ಸಾಧನ ಚಿತ್ರಗಳು. ಸ್ಟಾಕ್ ಹೋಂ ಅಧಿವೇಶನಕ್ಕೆಂದೇ ಅವರು ವಿಶೇಷವಾಗಿ ಈ ಚಿತ್ರವನ್ನು ಬರೆದಿದ್ದಾರೆ.

"ಯುದ್ಧವೆಂದರೇನೆಂಬುದು ನಮಗೆ ಗೊತ್ತು"

ಸರ್ವೋದಯದ ದೀಕ್ಷೆಯನ್ನು ವಹಿಸಿ ಭಾರತದಲ್ಲಿ ನೆಲೆಸಿರುವ ಇಂಗ್ಲಂಡಿನ ಡೋನಾಲ್ಡ್ ಗ್ರೂಮ್‌ರವರು ಅತ್ಯಂತ "ಸಂತೋಷ" ದಿಂದ ಈ ಸಭೆಗೆ ಬಂದಿದ್ದು ಈ ಕ್ರಮವನ್ನು ಅಭಿನಂದಿಸಿದರು.

ಶ್ರೀ ಗ್ರೂಮ್‌ರವರು ಕಳೆದ ಮಹಾಯುದ್ಧದಲ್ಲಿ ಸ್ಪೈನ್ ಮುಂತಾದ ಕಡೆಗಳಲ್ಲಿದ್ದವರು. ಯುದ್ಧದ ಕ್ರೌರ್ಯವನ್ನೂ ಭೀಕರತೆಯನ್ನೂ, ರಾಕ್ಷಸೀಯತೆಯನ್ನು ಕಂಡಿದ್ದ ಅವರು ಪ್ರಪಂಚ ಶಾಂತಿಗೆ ಅಹಿಂಸೆಯೊಂದೇ ತಾರಕವೆಂದು ಘೋಷಿಸಿದರು.

"ಅಂತರರಾಷ್ಟ್ರೀಯ ಸಹಕಾರ, ನಿಶ್ಶಸ್ತ್ರೀಕರಣಗಳಲ್ಲಿ ನನಗೆ ನಂಬಿಕೆಯಿದೆ. ಅಂತೆಯೇ ಜನ ಎಲ್ಲಿಯೇ ಇರಲಿ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ನಿಷೇಧಕ್ಕೂ, ಅಂತರರಾಷ್ಟ್ರೀಯ ಸಹಕಾರಕ್ಕೂ ಒತ್ತಾಯ ಹಾಕಬೇಕು" ಎಂದು ಕೇಳಿಕೊಂಡರು.

ಇದಕ್ಕೂ ಮೊದಲು ಎನ್. ಆರ್. ಮೂರ್ತಿಯವರು ಮಾತನಾಡಿ ಕ್ರಿ. ಶ. 2000ಕ್ಕಿಂತ ಮೊದಲಿನಿಂದಲೂ ಭಾರತವು ಶಾಂತಿ ಸಂದೇಶ ಬೀರುತ್ತ ಬಂದಿದೆಯೆಂದೂ ಇದೇನು ನಮಗೆ ಹೊಸತಲ್ಲವೆಂದೂ, ಆದರೆ ಈಗಿನ ಪ್ರಪಂಚದ ಸ್ಥಿತಿ ಬದಲಾಯಿಸಿದ್ದು ಎಲ್ಲಾ ದೇಶಗಳ ಜನರು ಶಾಂತಿಗಾಗಿ ಬಲವಂತ ಹಾಕಬೇಕೆಂದು ಕೇಳಿಕೊಂಡರು.

ಅಧ್ಯಕ್ಷರು ರಾಷ್ಟ್ರ ರಾಷ್ಟ್ರಗಳಲ್ಲಿರುವ ಪರಸ್ಪರ ಯುದ್ಧದ ಭಯ ಭಾವನೆ ತೊಲಗದಿದ್ದರೆ ಯುದ್ಧಕ್ಕೆ ಕೊನೆಯಿಲ್ಲವೆಂದೂ ಮೊದಲು ಅದು ನಿವಾರಣೆಯಾಗಿ ರಾಷ್ಟ್ರಗಳು ಪರಸ್ಪರ ಸಂಧಾನ ಸಹಕಾರಗಳಿಂದ ಬಾಳುವುದನ್ನು ಕಲಿಯಬೇಕಾಗಿದೆಯೆಂದೂ ತಿಳಿಸಿದರು.

ಗೊತ್ತುವಳಿಗಳು

ಸ್ಟಾಕ್ ಹೋಂ ಅಧಿವೇಶನಕ್ಕೆ ಸ್ವಾಗತ

ಜುಲೈ ತಿಂಗಳ 16ರಿಂದ 22ರವರೆಗೆ ನಡೆಯಲಿರುವ ಸ್ಟಾಕ್ ಹೋಮ್‌ನ ಅಧಿವೇಶನಕ್ಕೆ ಸ್ವಾಗತ ಹಾಗೂ ಬೆಂಬಲಗಳನ್ನು ನೀಡಬೇಕೆಂಬ ಗೊತ್ತುವಳಿಯನ್ನು ಅಧ್ಯಕ್ಷರು ಮಂಡಿಸಿದರು.

ಈ ಗೊತ್ತುವಳಿಯನ್ನು ಶ್ರೀ ಕಿಚ್ಚು ಅವರು ಅನುಮೋದಿಸುತ್ತಾ ಅಲ್ಲಿಯೆ ತೂಗುಹಾಕಿದ್ದ ಭಾವ ಚಿತ್ರದ ಕಡೆಗೆ ಪೇಕ್ಷಕರ ಗಮನ ಸೆಳೆದು "ನ್ಯೂಕ್ಲಿಯರ್ ಯುದ್ಧವೇನಾದರೂ ನಡೆದರೆ ಮನುಸಂತಾನದ ಮುಕ್ತಾಯವೂ ಮಾನವ ನಾಗರಿಕತೆಯ ಅಂತ್ಯವೂ ಆಗುತ್ತದೆ" ಎಂದು ಹೇಳಿದರು.

ಅವಿರೋಧವಾಗಿ ಗೊತ್ತುವಳಿ ಅಂಗೀಕರಿಸಲ್ಪಟ್ಟಿತು.

ನಿಶ್ಶಸ್ತ್ರೀಕರಣ: ಸೋವಿಯತ್ ರಷ್ಯವು ಏಕ ಪಕ್ಷೀಯವಾಗಿ ಅಣುಪರೀಕ್ಷೆಗಳನ್ನು ತಡೆಹಿಡಿಯುವದನ್ನು ಸ್ವಾಗತಿಸುವ ಹಾಗೂ ಅಣುಶಸ್ತ್ರಾಸ್ತ್ರಗಳನ್ನು ತಯಾರಿಸುವ, ಸಂಗ್ರಹಿಸುವ, ಪರೀಕ್ಷಿಸುವ ಮತ್ತು ಶಕ್ತಿ ರಾಜಕೀಯವನ್ನು ಖಂಡಿಸುವ ನಿಶ್ಶಸ್ತ್ರೀಕರಣದ ಗೊತ್ತುವಳಿಯನ್ನು ಶ್ರೀ ಎ. ಟಿ. ಶಾಮಾಚಾರ್‌ರವರು (ಸಿದ್ಧತಾ ಸಮಿತಿಯ ಉಪಾಧ್ಯಕ್ಷರು) ಮಂಡಿಸಿದರು.

ಈ ಗೊತ್ತುವಳಿಯನ್ನು ಅನುಮೋದಿಸಿದ ಶ್ರೀ ಎ.ಟಿ. ಬೆಹನನ್‌ರವರು ಮಾತನಾಡುತ್ತ ಜನಾಂಗ ಜನಾಂಗಗಳು ಕೂಡಿ ಬಾಳಬಲ್ಲವೆಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಆದರೆ ರಾಷ್ಟ್ರಗಳ ಸರಕಾರಗಳು ಕೂಡಿ ಬಾಳುವುದದ್ನು ಕಲಿಯಬೇಕು. ಅದಕ್ಕಾಗಿ ನಿಶ್ಶಸ್ತ್ರೀಕರಣವಾಗಲೇಬೇಕು" ಎಂದು ಪ್ರದಿಪಾದಿಸಿದರು.

ನಿಶ್ಶಸ್ತ್ರೀಕರಣದ ಹಿಂದೆ "ಸಂಪೂರ್ಣ" ಎಂಬ ಶಬ್ದವನ್ನು ಹಾಕಬೇಕೆಂದು ಅಧ್ಯಕ್ಷರು ತಿದ್ದುಪಡಿ ತಂದರು. ಅದೂ ಅವಿರೋಧವಾಗಿ ಅಂಗೀಕರಿಸಲ್ಪಟ್ಟು ಯಾವ ವಿರೋಧವೂ ಇಲ್ಲದೆ ಗೊತ್ತುವಳಿ ಅಂಗೀಕರಿಸಲ್ಪಟ್ಟಿತು.

ಅಲ್ಜೀರಿಯಾ ಸ್ವಾತಂತ್ರ್ಯಕ್ಕೆ ಬೆಂಬಲ

ಫ್ರೆಂಚ್ ಸರಕಾರವು ಅಲ್ಜೀರಿಯಾದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡುತ್ತಿರುವ ಫಾಸಿಸ್ಟ್ ನೀತಿಯನ್ನು ಖಂಡಿಸಿ ಅಲ್ಜೀರಿಯಾದ ಸ್ವಾತಂತ್ರ್ಯ ಹೋರಾಟಕ್ಕೂ, ಸ್ವಾತಂತ್ರ್ಯಕ್ಕೂ ಬೆಂಬಲ ನೀಡಬೇಕು ಎಂಬ ಗೊತ್ತುವಳಿಯನ್ನು ಕಾರ್ಮಿಕ ನಾಯಕ ಶ್ರೀ ಎಂ. ಎಸ್. ಕೃಷ್ಣನ್‌ರವರು ಮಂಡಿಸಿದರು.

ಈ ಗೊತ್ತುವಳಿಯನ್ನು ಅನುಮೋದಿಸಿದ ಶ್ರೀ ಎನ್. ಆರ್. ಮೂರ್ತಿ (ಬೆಂಗಳೂರು ಕಾರ್ಪೋರೇಷನ್ನಿನಲ್ಲಿ ವಿರೋಧ ಪಕ್ಷದ ನಾಯಕರು) ಯವರು ಮಾತನಾ

ಡುತ್ತಾ "ಡಿಗಾ…
ಸಾಹಸವಾದ…
ಲ್ಜೀರಿಯಾದಲ್ಲಿ…
ನನಗೆನಿಸುತ್ತದೆ…
ಯದೆ ಪ್ರಪಂಚ…
ಯೇ ಅಲ್ಜೀರಿ…
ಬೆಂಬಲ ನೀಡ…
ಸಹಾಯ ನೀಡ…
ಗಿ ಕೇಳಿಕೊಂಡ…
ಸಭಿಕರಲ್ಲಿಂದ…
ಗೊತ್ತುವಳಿಗೆ ಬೆ…
ಎಲ್ಲಾ ಗೊ…
ದಾಗಿ ಸಭಿಕರಿಂ…
ಗೀಕರಿಸಲ್ಪಟ್ಟವ…

ಬೆಂಗಳೂರಿ…

ಸ್ಟಾಕ್‌ಹೋ…
22ರ ವರೆಗೆ ನಡೆ…
ಣ ಮತ್ತು ಅಂ…
ಮಹಾಧಿವೇಶನ…
ಗಳಾದ ಎನ್. …
ಶೆಟ್ಟಿ, ಬಿ. ರಾ…
ದಾಮೋದರನ್…
ಳಾಗಿ ತೆರಳುತ್ತಾ…

ಅಣು ಅ…
ಇಂಗ್ಲೆಂಡಿ…

ಇಂಗ್ಲೆಂಡ್…
ಅಣು ಅಪಾಯ…
ಪ್ರಯೋಗಗಳನ್ನು…
ನಡೆಸುತ್ತಿದ್ದವು.
ಯಾವುದೇ ಒಂ…
ವಾಗಿಲ್ಲ ಎಂಬ…
ಎಚ್ಚರಿಸುತ್ತ ಬ…
ನಿಸಲಿಲ್ಲ. ಇ…
ಅವನ್ನು ದುಲ…
ಅಪಾಯ ಈಗ…
ರೇಡಿಯೇಷನ್ನಿ…
ಮ ಬಾರಿಯಾಗಿ…
ಸಂಭವಿಸಿದೆ.
ಕಳೆದ ವರು…
ಗರದ ಕ್ರಿಸ್‌ಮ…
ಆಸ್ಫೋಟನೆಯ…
ಡಿನ ವಿಲಿಯಂ…
(ವಯಸ್ಸು 20…
ರೆ. ಪೋಸ್ಟ…
ದಿದೆ.
ಮೋರಿಸ್…
ರ್ಸ್ ಸಂಸ್ಥೆಗೆ ಸ…
ಸ್ಥೆಯ ಸ್ವಾನ್ಸಿ…
ರ್ಯದರ್ಶಿ ಡಬ್ಲ್ಯ…
ಹುಡುಗ ಅಣ…
ಭಾಗವಹಿಸಿದ್ದ…
ಮಿಯಾ (ರಕ್ತ…
ತೆಂದೂ" ಹೇಳ…
ಸೈನಿಕ ಶಾ…
ಭಾಗದಲ್ಲಿ ಕೆಲ…
ಸಾಯುತ್ತಿರುವ…
ಎಂದೂ ಅವರ…
ಈ ಹುಡುಗ…
ಪೆನ್ಷನ್ ಅರ್ಜಿ…
A—1 ದ…
ರುಗಳು ಇವನ…
ಕ್ಷಿಸಿದರೆಂದೂ…
ದಲ್ಲಿ ಸಂರಕ್ಷಣ…
ನೆಂದೂ ಫ್ರಾನ್ಸಿ…

ವಿಶ್ವಶಾಂತಿ ನಮ್ಮ ಗುರಿ

ಯುದ್ಧ ಪಿತೂರಿಯು ಒಳಗೊಳಗೆ
ಶಾಂತಿಯ ಘೋಷವು ಬಹಿರಂಗ
ಶತಶತಕೋಟಿ ಅಂತರಂಗದಿ
ಹೊಮ್ಮಿದೆ ವಿಶ್ವದಾದ್ಯಂತ
ಶಾಂತಿಯ ಘೋಷವು ಬಹಿರಂಗ
ಮಿತಿಮೀರಿದ ಲಾಭ ಗಳಿಕೆ ಪಿಪಾಸೆ
ಅಣು ಅಸ್ತ್ರದದೊಡೆತನ ಉಯ್ಯಾಲೆ
ಜಗವನೆ ಜಯಿಸುವ ಹೊಂಗನಸು
ಯುದ್ಧದ ಹಾದಿಯು ಹಿಡಿದಿದೆ ಅಮೆರಿಕವು

ಪ್ರಗತಿ ವಿಕಾಸಕೆ ಮಹದುಪಕಾರಿ
ವಿಶ್ವದಿ ನಶಿಸದೆ ನೆಲಸಿರಲೆಂದು
ಚಿರಶಾಂತಿಯ ದೂತರು ಆ ರಷ್ಯನರು
ಅಣುಅಸ್ತ್ರದ ಬಳಕೆಯ-ತ್ಯಜಿಸಿಹರು
ಶೀತಲ ಯುದ್ಧದ ಒಳಗುದಿ ನೀಗಿ
ಬೆಂಕಿಯ ಯುದ್ಧದ ಅಂಜಿಕೆ ಅಳಿಸಿ,
ವಿಶ್ವದ ಜನತೆ ಒಂದಾಗಿ
ಪಂಚಶೀಲವೆ ಅಡಿಗಲ್ಲು
ವಿಶ್ವಶಾಂತಿಯು ನಮ್ಮ ಗುರಿ

—"ಕಾರ್ಮಿಕ ಕವಿ"

ಘಾಸಿಸಂನ, ವ
ಪ್ರತಿಷ್ಠೆ ಅ
ಗುತ್ತದೆ ಎಂದು
ಾತುವಾದ ಆಳಿ
ುಯಿಲ್ಲ. ಅಂತೆ
ಕ್ಕೈಕ್ಕೆ ನಾವು
ಾರತ ಸರಕಾರ
ಂದು ಮುಂತಾ
ಷ್ಠಿ ತಾವೂ ಈ
ಡಿದರು.
ೂ ಕೊನೆಯ
ೀಧವಾಗಿ ಅಂ

ತಿನಿಧಿಗಳು
ುಲೈ 16ರಿಂದ
ನಿಶ್ಶಸ್ತ್ರೀಕರ
ಯ ಸಹಕಾರದ
ಾರಿನಿಂದ ಶ್ರೀ
ಾರ್ತಿ, ಪಿ. ಸಿ.
ಮತ್ತು ಪಿ.
ನು ಪ್ರತಿನಿಧಿಗ

ದಿಂದ
ನು ಸಾವು
ಗಳು ತಮಗೆ
ಟ್ಟದಂತೆ ತಮ್ಮ
ಲ್ಲಿ ಬೇರೆಲ್ಲೋ
ಅಪಾಯಗಳು
ಪ್ರದೇಶಕ್ಕೆ ಮಿತ
ಂತಿ ಪ್ರಿಯರು
ಯಾರೂ ಗಮ
ಅಮೇರಿಕಗಳು
ಆದರೆ ಆ
ನ್ನೇ ತಟ್ಟಿದೆ.
ಂಡಿನಲ್ಲಿ ಪ್ರಥ
ಒಂದು ಸಾವು
ಕ್ ಮಹಾಸಾ
ಳಲ್ಲಿಯ ಅಣ್ವ
ಾಗಿ ಇಂಗ್ಲೆಂ
ನ್ ನೋರಿಸ್
ೃತರಾಗಿದ್ದಾ
ಕೂಡ ನಡೆ
ಎಂಜಿನೀಯ
ದ್ದ. ಈ ಸಂ
ಶಾಖೆಯ ಕಾ
ಫ್ರಿಸ್ಸಿಸ್ "ಈ
ಪರೀಕ್ಷೆಯಲ್ಲಿ
ಸರಿಂದ ಲೂಕೆ
ಅಂಟಿಕೊಂಡಿ
ಬಾಂಬ್ ವಿ
ತ್ತಿರುವ ಸೈನಿಕ
ಪ್ರಥಮ ಬಾರಿ
ರೆ.
ಾಕಿಕೊಂಡಿದ್ದ
ಟ್ಟಿದೆ.
ಜಪ ಡಾಕ್ಟ
ಶರವನ್ನು ಪರೀ
ಪರೀಕ್ಷಾ ಕಾಲ
ಕೊಟ್ಟಿದ್ದ
ಾರೆ.

ಇ. ಎಂ. ಎಸ್. ಪ್ರಸ್ತಾವನೆಗೆ — ಥಾನುಪಿಳ್ಳೆ — ಶ್ರೀಮನ್ನಾರಾಯಣರ ವ್ಯಾಖ್ಯಾನ

ಕೇರಳದ ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಇತ್ತೀಚೆಗೆ ಕೊಯಿಂಬತ್ತೂರಿನ ಬಹಿರಂಗ ಸಭೆಯೊಂದರಲ್ಲಿ ಮಾಡಿದ್ದ ಭಾಷಣವನ್ನು ಕೇರಳದ ಪಿ. ಎಸ್. ಪಿ. ನಾಯಕ ಪಟ್ಟಂ ಥಾನುಪಿಳ್ಳೆ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣ ಇವರು ತೀವ್ರವಾಗಿ ಖಂಡಿಸಿದ್ದಾರೆ. ನಂಬೂದ್ರಿಪಾದ್‌ರವರ ಮಾತುಕತೆಗಳಿಗೆ ಇಲ್ಲದ ಸಲ್ಲದ ಅಪಾರ್ಥ ಕಲ್ಪಿಸಿ ವಿಮರ್ಶಿಸಿದ್ದಾರೆ. ವಿರೋಧಿಯ ಮುಖಕ್ಕೆ ತಾವೇ ಮಸಿ ಬಳಿದು, ಆತ ಕರ್ರಗಿದ್ದಾನೆಂದು ನಿಂದೆ ಮಾಡುವ ತಿಳಿಗೇಡಿಗಳ ಹುಚ್ಚು ಕೆಲಸದ ಹಾಗಿದೆ ಈ ಪ್ರತಿವಾದಿಗಳ ಟೀಕೆ, ಶಕುನಿ ಭಗವದ್ಗೀತೆ ಓದಿ ಅರ್ಥ ಹೇಳಿದರೆ ಹೇಗೋ ಹಾಗೆ!

ಪಟ್ಟಂಥಾನು ಪಿಳ್ಳೆ ಮತ್ತು ಶ್ರೀಮನ್ನಾರಾಯಣ ಇವರ ವ್ಯಾಖಾನ ಹೀಗಿದೆ: ಕಮ್ಯೂನಿಸ್ಟ್ ಪಾರ್ಟಿಯ ಸರ್ವಾಧಿಕಾರ ಪ್ರವೃತ್ತಿಯನ್ನು ಇತರ ಪಕ್ಷಗಳು ವಿರೋಧಿಸಿದರೆ ದೇಶದಲ್ಲಿ ಅಂತರ್‌ಯುದ್ಧ ಉಂಟಾಗುವುದೆಂದು ನಂಬೂದ್ರಿಪಾದ್ ಹೇಳಿದರು! ಕಮ್ಯೂನಿಸ್ಟ್ ಪಾರ್ಟಿಯ ಅಮೃತಸರದ ಅಧಿವೇಶನವು "ಶಾಂತ ಮತ್ತು ಪ್ರಜಾಪ್ರಭುತ್ವ ಮಾರ್ಗಗಳಿಂದ ಅಧಿಕಾರ ಪಡೆಯಲು ಪ್ರಯತ್ನಿಸುವ" ಉದ್ದೇಶವನ್ನು ಘೋಷಿಸಿರುವುದನ್ನು ನಂಬಕೂಡದು ಎನ್ನುವುದಕ್ಕೆ ನಂಬೂದ್ರಿಪಾದರ ಮಾತು—"ಅವರು ಹಾಕಿರುವ ಬೆದರಿಕೆ" —ಉದಾಹರಣೆಯಂತೆ!

ಈ ವಿಮರ್ಶಕರು ವ್ಯಾಖ್ಯಾನಿಸಿರುವಂತೆ ನಂಬೂದ್ರಿಪಾದ್‌ರವರು ಹೇಳಿಲ್ಲ, ಉದ್ದೇಶಿಸಿಲ್ಲ. ಇವರು ತಮಗೆ ಬೇಕಾದಂತೆ ನಂಬೂದ್ರಿಪಾದ್‌ರವರ ಮಾತುಗಳನ್ನು ತಿರುವು—ಮುರುವು ಮಾಡಿಕೊಂಡಿದ್ದಾರೆ, ತಪ್ಪು ಅರ್ಥ ಕೊಟ್ಟಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿಯನ್ನು, ಕೇರಳದ ಕಮ್ಯೂನಿಸ್ಟ್ ಸರಕಾರವನ್ನು, ಇತರ ಪಕ್ಷಗಳು ವಿರೋಧಿಸಬಾರದು ಎಂದು ನಂಬೂದ್ರಿಪಾದ್ ಹೇಳಿಲ್ಲ. ಇತರ ಪಕ್ಷಗಳ ವಿಮರ್ಶೆ ಮತ್ತು ವಿರೋಧ ಇರುವುದು ಸ್ವಾಭಾವಿಕ ಮಾತ್ರವಲ್ಲ ಸ್ವಾಗತವೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ ಜನರನ್ನು "ಕಮ್ಯೂನಿಸ್ಟರು" ಮತ್ತು "ಕಮ್ಯೂನಿಸ್ಟರಲ್ಲದವರು" ಎಂಬ ಎರಡು ಬಣಗಳಾಗಿ ವಿಂಗಡಿಸಿ, ಪರಸ್ಪರ ದ್ವೇಷ ಹುಟ್ಟಿಸಿ, ಬಡಿದಾಡಿಸುವ ನಶೀಕರಣದ ದಾರಿ ಸರಿಯಲ್ಲ; ಕಮ್ಯೂನಿಸ್ಟ್ ಪಾರ್ಟಿಯನ್ನೂ ಕೇರಳದ ಕಮ್ಯೂನಿಸ್ಟ್ ಸರಕಾರವನ್ನೂ ವಿರೋಧಿಸುವ ಪಕ್ಷಗಳು ಈ ದಾರಿಯಲ್ಲಿ ಜನರನ್ನು ನಡೆಸುವುದು ಅಪಾಯಕಾರಿ ಎಂದು ನಂಬೂದ್ರಿಪಾದ್ ಎಚ್ಚರಿಸಿದ್ದಾರೆ. ಪ್ರತಿಪಕ್ಷಗಳು ಆಳುವ ಪಕ್ಷದ ನ್ಯೂನತೆಗಳನ್ನೂ ಆಡಳಿತೆಯ ದೋಷಗಳನ್ನೂ ಎತ್ತಿ ಹೇಳುವುದು, ಸರಕಾರದ ಕ್ರಮ-ನಿಯಮಗಳನ್ನು ವಿರೋಧಿಸುವುದು, ತಿದ್ದುವ ದೃಷ್ಟಿಯಿಂದಾಗಲಿ. ಕಾಂಗ್ರೆಸ್ ಸರಕಾರಗಳಿರುವ ಪ್ರಾಂತಗಳಲ್ಲಿ ಕಮ್ಯೂನಿಸ್ಟರು ಈ ದೃಷ್ಟಿ ಇಟ್ಟುಕೊಂಡಿದ್ದಾರೆ; ಕೇರಳದಲ್ಲಿ ಕಾಂಗ್ರೆಸ್, ಪಿ. ಎಸ್. ಪಿ. ಮತ್ತಿತರ ಪ್ರತಿಪಕ್ಷಗಳಿಗೂ ಇದೇ ದೃಷ್ಟಿ ಇರಲಿ ಎಂದು ನಂಬೂದ್ರಿಪಾದ್ ಹಾರೈಸಿದ್ದಾರೆ. ದೇಶದ ವಿವಿಧ ಪಕ್ಷ-ಪಂಗಡಗಳು ಪರಸ್ಪರ ತಿದ್ದುವ ದೃಷ್ಟಿಕೋನದಿಂದ ತಮ್ಮ ತಮ್ಮೊಳಗೆ ವ್ಯವಹರಿಸಿದರೆ, ವಿರೋಧಿಸಬೇಕಾದಲ್ಲಿ ವಿರೋಧಿಸುವಾಗಲೆ ಸಹಕರಿಸಲು ಸಾಧ್ಯವಿರುವಲ್ಲಿ ಸಹಕರಿಸಿದರೆ, ರಾಷ್ಟ್ರೀಯ ಐಕ್ಯತೆಯು ಸಾಧ್ಯವಾಗುವುದು ಎಂದು ನಂಬೂದ್ರಿಪಾದ್ ತಿಳಿಸಿದ್ದಾರೆ. ಕಾಂಗ್ರೆಸ್, ಪಿ. ಎಸ್. ಪಿ. ಮತ್ತಿತರ ಪಕ್ಷಗಳು ಕಮ್ಯೂನಿಸ್ಟ್ ಪಾರ್ಟಿಯ ಮತ್ತು ಕೇರಳ ಸರಕಾರದ ಬಗ್ಗೆ ಅನುಸರಿಸುವ ರೀತಿನೀತಿಗಳು ರಾಷ್ಟ್ರೀಯ ಐಕ್ಯತೆಗೆ ಸಹಾಯಕವಲ್ಲ, ಪ್ರತಿಬಂಧಕ ಎಂದು ನಂಬೂದ್ರಿಪಾದ್ ಹೇಳಿದ್ದಾರೆ. ಜನರನ್ನು ಪರಸ್ಪರ ವಿರೋಧವಾದ ಎರಡು ತಂಡಗಳಾಗಿ ವಿಂಗಡಿಸಿ ಬಡಿದಾಡಿಸಲು ಯತ್ನಿಸುವ ಪಕ್ಷಗಳ ವರ್ತನೆಯು ದೇಶವನ್ನು ಒಳಜಗಳದ ಗಂಡಾಂತರಕ್ಕೆ ತಲುಪಿಸಬಹುದು ಎಂದು ನಂಬೂದ್ರಿಪಾದ್ ಮುನ್ನೆಚ್ಚರಿಕೆ ಕೊಟ್ಟಿದ್ದಾರೆ

ಪತ್ರಿಕೆಗಳಲ್ಲಿ ಪ್ರಕಟವಾಗಿರುವ ನಂಬೂದ್ರಿಪಾದ್‌ರವರ ಭಾಷಣದ ವರದಿ ಹಾಗೂ ಆಕ್ಷೇಪಗಳಿಗೆ ಉತ್ತರವಾಗಿ ಅವರು ಕೊಟ್ಟಿರುವ ಹೇಳಿಕೆ ವ್ಯಕ್ತಪಡಿಸುವ ಅಭಿಪ್ರಾಯ ಇದು. ಪಟ್ಟಂಥಾನು ಪಿಳ್ಳೆ ಶ್ರೀಮನ್ನಾರಾಯಣರು, 'ಜನವಾಣಿ' ಅಗ್ರಲೇಖಕರಂಥವರು ಇದಕ್ಕೆ ಬೇರೆ ಅರ್ಥ ಊಹಿಸಿರೆ ಅದಕ್ಕೆ ಯಾರು ಹೊಣೆ? ನಂಬೂದ್ರಿಪಾದರ ಸರಳವಾದ ಮಾತುಗಳ ಅರ್ಥವನ್ನೂ ಅವುಗಳಲ್ಲಿ ಅಡಕವಾಗಿರುವ ಅಭಿಪ್ರಾಯವನ್ನೂ ಸರಿಯಾಗಿ ತಿಳಿದುಕೊಳ್ಳುವ ಶಕ್ತಿ ಜನರಿಗೆ ಇದೆ. ದುರುದ್ದೇಶ ಪೂರಿತವಾದ ವ್ಯಾಖ್ಯಾನ ಮತ್ತು ವಿಮರ್ಶೆ ಬೆಲೆಬಾಳಲಾರದು.

ನಂಬೂದ್ರಿಪಾದ್‌ರವರು ಈ ಮಾತುಗಳನ್ನು ಸುಮ್ಮ ಸುಮ್ಮನೆ ಹೇಳಿಲ್ಲ. ಅದಕ್ಕೆ ಸಮರ್ಪಕ ಕಾರಣವಿದೆ. ಕಳೆದ ಒಂದು ವರ್ಷದಲ್ಲಿ ಕೇರಳದ ಪ್ರತಿಪಕ್ಷಗಳ ನಾಯಕರು ಅಲ್ಲಿ ನಡೆಸಿರುವ ಗಲಭೆ-ಗೊಂದಲಗಳ ಹಿನ್ನೆಲೆಯಲ್ಲಿ ಅವರು ಈ ಮಾತುಗಳನ್ನಾಡಿದ್ದಾರೆ. ಪಟ್ಟಂಥಾನು ಪಿಳ್ಳೆ, ಶ್ರೀಮನ್ನಾರಾಯಣಾದಿಗಳಿಗೆ ಮರೆತು ಹೋಗಿದ್ದರೆ, ಅಥವ ಜನ ಮರೆತಿರಬಹುದೆಂದು ಅವರು ತಿಳಿದುಕೊಂಡಿದ್ದರೆ, ಈ ಕೆಳಗಿನ ಸಂಗತಿಗಳನ್ನು ಅವರ ಮುಂದಿಡಲು ಬಯಸುತ್ತೇವೆ.

ಪೋಲೀಸಿನವರು ಖಾತೆಯ ಮಂತ್ರಿಯ ಆಜ್ಞೆಗಳನ್ನು ಪಾಲಿಸಬೇಕಾಗಿಲ್ಲ ಎಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ದಾಮೋದರ ಮೇನನ್ ಬಹಿರಂಗವಾಗಿ ಹೇಳಿಕೆಯಿತ್ತಿದ್ದರು.

ಪೋಲೀಸು ಖಾತೆಯ ಬಗ್ಗೆ ಸರಕಾರ ಅನುಸರಿಸುವ ಧೋರಣೆ ಬದಲಾಗದಿದ್ದರೆ, "ಆತ್ಮ ರಕ್ಷಣೆಗೆ ಸ್ವಂತ ಖಾಸಗಿ ಸೇನೆಯನ್ನು ಕಟ್ಟುವೆವು" ಎಂದು ಪ್ರತಿಪಕ್ಷದ ನಾಯಕ ಪಿ. ಟಿ. ಚಾಕೋ ಎಸೆಂಬ್ಲಿಯಲ್ಲಿ ಘೋಷಿಸಿದ್ದರು.

ಮಾಜಿ ಮುಖ್ಯ ಮಂತ್ರಿ ಪನಂಬಳ್ಳಿ ಗೋವಿಂದ ಮೇನನ್ ಇತ್ತೀಚೆಗೆ ಒಂದು ಭಾಷಣದಲ್ಲಿ, ಸರಕಾರಿ ನೌಕರರು ಸರಕಾರದ ಆಜ್ಞೆಗಳನ್ನು ಅನುಸರಿಸಕೂಡದು ಎಂದು ಕರೆಯಿತ್ತಿದ್ದಾರೆ.

ಪ್ರತಿಪಕ್ಷ ನಾಯಕರ ಈ ರೀತಿಯ ಅತಿರೇಕತೆಗಳ ವಿರೋಧವಾಗಿ ಸರಕಾರ ಈತನಕ ನಿರೋಧನ ಕ್ರಮ ವಹಿಸಿರುವುದಿಲ್ಲ. ಈ ಅತಿರೇಕ ಮಾತುಗಳನ್ನು ಅವರು ಕೃತಿಗೆ ಇಳಿಸಿದರೆ, ಪ್ರತಿಬಂಧಕ ಕ್ರಮ ತೆಗೆದುಕೊಳ್ಳದಿರಲು ಸಾಧ್ಯವಿಲ್ಲ ಅಂಥ ಕ್ರಮವಹಿಸಬೇಕಾಗಿ ಬಂದರೆ, ಅದರ ಸಂಪೂರ್ಣ ಹೊಣೆ ಪ್ರತಿಪಕ್ಷಗಳದ್ದೇ ಹೊರತು ಕಮ್ಯೂನಿಸ್ಟ್ ಸರಕಾರದ್ದಲ್ಲ, ಕಮ್ಯೂನಿಸ್ಟ್ ಪಾರ್ಟಿಯದಲ್ಲ

ನಂಬೂದ್ರಿಪಾದ್‌ರವರ ಪ್ರಸ್ತಾವನೆಯ ಬಗ್ಗೆ ಕೇಂದ್ರ ಸರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟಂ ಥಾನುಪಿಳ್ಳೆ ಕೇಳಿಕೊಂಡಿದ್ದಾರೆ. ಅದು ಸರಿ! ಕೇರಳದ ಜನರ ವಿಶ್ವಾಸ ಕಳೆದುಕೊಂಡ, ಜನರಿಂದ ಪ್ರತ್ಯೇಕಹೊಂದಿ, ಅವರ ಕೈಯಲ್ಲಿ ಸೋಲನ್ನು ಅನುಭವಿಸಿರುವ ಪಟ್ಟಂಥಾನುಪಿಳ್ಳೆ ಮತ್ತವರ ಸಂಗಾತಿಗಳಿಗೆ ಬೇರೆ ಗತಿಯಿಲ್ಲ. ಕೇಂದ್ರವೇ ಅವರನ್ನು ರಕ್ಷಿಸಬೇಕು—ಸಾಧ್ಯವಿದ್ದರೆ! ಜನರು ಕೈಬಿಟ್ಟ ಮೇಲೆ ಕೇಂದ್ರದ ಮರೆಹೋಗುವುದೊಂದೇ ದಾರಿ ಅವರಿಗೆ ಉಳಿದಿರುವುದು. ಆದರೆ ಕಮ್ಯೂನಿಸ್ಟ್ ಪಾರ್ಟಿಯೂ ಕೇರಳದ ಕಮ್ಯೂನಿಸ್ಟ್ ಸರಕಾರವೂ ದಿನ ದಿನಕ್ಕೆ ಹೆಚ್ಚು ಹೆಚ್ಚು ಜನಾದರಣೆ ಪಡೆದು ಬಲ ಹೊಂದುವಾಗ ಕಮ್ಯೂನಿಸ್ಟ್ ವಿರೋಧಿಗಳು, ಜನರಿಂದ ತಿರಸ್ಕರಿಸಲ್ಪಟ್ಟರೂ ಅಧಿಕಾರದ ಮೋಹ ಬಿಡದವರು, ಯಾರ ಮರೆಹೊಕ್ಕರೆ ತಾನೆ ಫಲವೇನು?

ನೀವೇನು ಹೇಳುತ್ತೀರಿ ?

"ಕೆಂಪು ಸಂಘಟನೆ" ಎಂಬುದಕ್ಕೆ ಕಾರಣ

ಪತ್ರಿಕಾ ವ್ಯವಸಾಯ ಒಂದು ಕಲೆ ಎನ್ನುವುದರಲ್ಲಿ ಸಂದೇಹವೇನಿಲ್ಲ ತಾನೆ? ಬರೆವಣಿಗೆ, ಅದರ ರೀತಿ, ಅದರಲ್ಲಿರಬೇಕಾದ, ಸತ್ಯಕ್ಕೆ ಸಮೀಪವಾದ ಊಹೆ ಎಲ್ಲವೂ ಬೇಕು ಅಲ್ಲವೆ?

ಆದರೆ "ಹಿಂದುಸ್ತಾನ್ ಟೈಮ್ಸ್" ಪತ್ರಿಕೆಯ ಡಿಲ್ಲಿಯ ಪ್ರತಿನಿಧಿ ಎಂಥ ಕಲೆ ಸೃಷ್ಟಿಸಿದ್ದಾನೆ ನೋಡಿ.

ಹೊಸತಾಗಿ ಸ್ಥಾಪಿತವಾದ ದೆಹಲಿಯ ಮುನ್ಸಿಪಲ್ ಕೆಲಸಗಾರರ ಯೂನಿಯನನ್ನು "ಕಮ್ಯೂನಿಸ್ಟ್ ಹತೋಟಿಗೊಳಪಟ್ಟ ಸಂಘ" ಎಂಬುದನ್ನು ಸಿದ್ಧಪಡಿಸಿ ನೊಡಬೇಕಾದ ಕಾರ್ಯ ಅವನಿಗೆ ಬಂತು. ಇದು ಕಷ್ಟಕರ ಕೆಲಸವೇ ಆಗಿತ್ತು. ಆದರೂ ಈತ ಸಿದ್ಧ ಮಾಡಿಯೇ ಮಾಡಿದ. ಅವನಿತ್ತ ಕಾರಣಗಳು ಹೀಗಿವೆ:

"ಇದರ ಅಧ್ಯಕ್ಷರಾದ ಶ್ರೀ ಫಿರೋಜ್ ಗಾಂಧಿಯವರು 1930ರ ಕಾಲಾವಧಿಯಲ್ಲಿ ಫ್ರಾನ್ಸಿನಲ್ಲಿದ್ದ 'ಫ್ರಂಟ್ ಪೊಪ್ಯುಲರ್' ಸಂಘಟನೆಯ ಪ್ರಚಂಡ ಬೆಂಬಲಿಗರಾಗಿದ್ದರು".

ಆ ಮೇಲೆ—

"ಮತ್ತು ಜನರಲ್ ಸೆಕ್ರೆಟರಿಗಳಾದ ಇಷಾರ್ ಸಿಂಗ್‌ರವರು ತಾವು ಸ್ವತಂತ್ರ ಕಾರ್ಮಿಕ ಸಂಘಟಕನೆಂದು ಹೇಳಿಕೊಂಡಿದ್ದರೂ ಅವರೂ ಅಷ್ಟೇ ಅಪಾಯಕಾರಿಯಾಗಿದ್ದಾರೆ. ಯಾಕೆಂದರೆ ರುಮಾನಿಯಾಕ್ಕೆ ಭೇಟಿಯಿತ್ತ ಭಾರತದ ಪ್ರತಿನಿಧಿ ಮಂಡಳವೊಂದರ ಸದಸ್ಯರಾಗಿದ್ದರಿವರು".

ಅಮೆರಿಕನ್ ನಾಯಕರ ದೈವೀ ಪಾತ್ರ !

'ನ್ಯೂಸ್ ವೀಕ್' ಎಂಬುದು ಅಮೇರಿಕೆಯ ಒಂದು ನಿಯತಕಾಲಿಕೆ. ಪ್ರಪಂಚದ ವ್ಯವಹಾರದಲ್ಲಿ ಅಮೇರಿಕನ್ನರಿಗೆ ದೈವೀ ಶಕ್ತಿಯ ಪಾತ್ರವಿದೆಯೆಂದು ಅದರ ನಂಬಿಕೆ. ಆದರೆ ಅದು ಇತ್ತೀಚೆಗೆ ಒಂದು ಸರ್ವೆ ನಡೆಸಿದಾಗ ದೊರೆತ ಫಲಿತಾಂಶ ಮಾತ್ರ ತುಂಬಾ ಕಹಿಯಾಗಿತ್ತು. ಅಂದರೆ ಅಮೇರಿಕೆಗೆ ವಿರೋಧವಾದ ಭಾವನೆ ಪ್ರಪಂಚದಲ್ಲಿ ಬಲವಾಗಿದೆ ಎಂಬುದೇ ಆಗಿತ್ತದು!

ಫ್ರೆಂಚರ ಕಣ್ಣಿನಲ್ಲಿ ಅಮೆರಿಕೆ:

"ಅಮೇರಿಕೆಯ ಕಲ್ಪನೆಯೇ ಸಾಮ್ರಾಜ್ಯಷಾಹಿ ಡಾಲರ್ ಸಂಸ್ಕೃತಿ...... ಉಹ್ಞಾ ನಿಜವಾದ ಸಂಸ್ಕೃತಿಯೇ ಇಲ್ಲದ ದೇಶ. ಅಲ್ಜೀರಿಯಾದ ಮೇಲೂ ಅವರಿಗೆ ಕಣ್ಣಿದೆ".

ಅರ್ಜೆಂಟೀನಾದ ಸಂಪಾದಕರೊಬ್ಬರು:

"ಅಮೇರಿಕೆಯೆಂದರೆ ಕುರಿಯ ಚರ್ಮದಲ್ಲಿರುವ ತೋಳ...."

ಆಗ್ನೇಯ ಏಷ್ಯಾದ ರಾಷ್ಟ್ರಗಳು:

"ಅಮೇರಿಕೆಯವರೆಂದರೆ ಅನಾಗರಿಕರು".

ಭಾರತದಲ್ಲಿ—

1957ರಲ್ಲಿ ಅಮೆರಿಕೆಯ ಐಕ್‌ರ ಬಗ್ಗೆಯೂ ಚೀನಾದ ಚೌ-ಎನ್-ಲ್ಯಾರವರ ಬಗ್ಗೆಯೂ ಸಾರ್ವಜನಿಕ ಅಭಿಪ್ರಾಯದ ಚುನಾವಣೆ ನಡೆಯಿತು. ಐಕ್‌ರಿಗೆ ಶೇ. 14·9 ಮತಗಳು ದೊರೆತರೆ ಚೌಎನ್‌ಲೈರಿಗೆ ಶೇ. 40·5ರಷ್ಟು ದೊರಕಿದವು. ಈ ಚುನಾವಣೆ ನಡೆಸಿದವರು ಅಮೇರಿಕಾ ವಿರೋಧಿಗಳಲ್ಲ. "ಭಾರತದ ಸಾರ್ವಜನಿಕಾಭಿಪ್ರಾಯ ಸಂಸ್ಥೆಯು" (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಒಪಿನಿಯನ್) ಎರಿಕ್ ಡಾ ಕೋಸ್ಟಾ ಅವರು!

ಕೆಂಪು ಪಥ !

ಇದೇ ಡಾ ಕೋಸ್ಟಾರ ಇನ್ನೊಂದು ಕತೆ ಸ್ವಾರಸ್ಯವಾಗಿದೆ. ಕೋಸ್ಟಾರು ತಮ್ಮ "ಈಸ್ಟರ್ನ್ ಎಕನಾಮಿಸ್ಟ್" ಪತ್ರಿಕೆಯ ವಾರ್ಷಿಕ ಸಂಪುಟವನ್ನು ಪ್ರಕಟಿಸಿದರು. ಅದರ ಮುಖ್ಯ ವಿಷಯ "ಭಾರತ ಮತ್ತು ಚೀನಾ: 1957–1956"— "ಒಂದು ದಶಕದ ತುಲನೆ".

ಮುಖಪುಟದಲ್ಲಿ ಒಂದು ನಕಾಶೆ ನಡುಹೋಗಿತ್ತು. ಭಾರತವು ನೀಲಿ ಬಣ್ಣದಲ್ಲೂ, ಚೀನವು ಕೆಂಪು ಬಣ್ಣದಲ್ಲೂ ಚಿತ್ರಿಸಲ್ಪಟ್ಟಿದ್ದವು. ಆದರೆ ದುರ್ದೈವವಶ ನೇಪಾಳ, ಭೂತಾನ, ಸಿಕ್ಕಿಮ್ ಇವುಗಳ

(೬ನೇ ಪುಟ ನೋಡಿ)

ರಾಷ್ಟ್ರೀಯ—

ಬೆನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಆಡಳಿತೆ

(೩ನೇ ಪುಟದಿಂದ)

ವಿಶ್ವವಿದ್ಯಾನಿಲಯವಾದ ಇಂಥ ಸಂಸ್ಥೆಯಲ್ಲಿ ತಲೆದೋರಿರುವ ಪರಿಸ್ಥಿತಿಗೆ ಜವಾಬುದಾರರನ್ನು ವಿಚಾರಣೆಗೆ ಗುರಿಪಡಿಸುವುದು ಅಗತ್ಯ. ಸರಕಾರವು ಆರಂಭದಲ್ಲೇ ತಕ್ಕ ಕ್ರಮ ತೆಗೆದುಕೊಳ್ಳದೆ ಈವರೆಗೆ ಸುಮ್ಮನಿದ್ದುದನ್ನು ಖಂಡಿಸಬೇಕಾಗಿದೆ. ರಾಷ್ಟ್ರದ ಆರ್ಥಿಕ ಮುನ್ನಡೆಗೆ ತಜ್ಞರುಗಳನ್ನು ತರಬೇತಿಗೊಳಿಸುವಂಥ ವಿದ್ಯಾ ಸಂಸ್ಥೆಗಳು ಹೀನಸ್ಥಿತಿಗಿಳಿದಿರುವುದು ವಿಷಾದಕರವಾಗಿದೆ. ಇಂಥ ಪರಿಸ್ಥಿತಿಯು ಬೆನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಷ್ಟೇ ಅಲ್ಲದೆ, ಇತರ ಕಡೆಗಳಲ್ಲೂ ಸಹಾ ಇದೆ.

ಕಾರ್ಯನಿರತ ಪತ್ರಿಕೋದ್ಯಮಿಗಳ ವೇತನ

ಸುಪ್ರೀಂ ಕೋರ್ಟು ಕಾರ್ಯನಿರತ ಪತ್ರಿಕೋದ್ಯಮಿಗಳ ವೇತನ ಸಮಿತಿಯ ನಿರ್ಧಾರವು ತಳ್ಳಿಹಾಕಿದ ನಂತರ ನಡೆದ ತ್ರಿಪಕ್ಷ ಸಮ್ಮೇಳನವು ಈ ಬಗ್ಗೆ ಯಾವ ನಿರ್ಧಾರಕ್ಕೂ ಬಾರದಿದ್ದ ಕಾರಣದಿಂದಾಗಿ ಕೇಂದ್ರ ಸರಕಾರ ತುರ್ತು ಆಜ್ಞೆಯೊಂದನ್ನು ಹೊರಡಿಸಿ, ಐದು ಮಂದಿ ಅಧಿಕಾರಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಿದೆ.

ತುರ್ತು ಆಜ್ಞೆಯ ಮೇಲೆ ರಚಿಸಲಾಗಿರುವ ಈ ಸಮಿತಿಯು ವೇತನ ಸಮಿತಿಯ ನಿರ್ಧಾರಗಳನ್ನು ಆಧಾರವಾಗಿರಿಸಿಕೊಂಡು, ವೇತನಗಳನ್ನು ಕೊಡಲು ಪತ್ರಿಕೆಗಳ ಸಾಮರ್ಥ್ಯವನ್ನು, ಮತ್ತು ಅದಕ್ಕೆ ಸಂಬಂಧಿಸಿದ ಇತರ ಪ್ರಶ್ನೆಗಳನ್ನು ಪರಿಶೀಲಿಸುವುದು. ಸಮಿತಿಯು ಕೈಗಾರಿಕಾ ವಿವಾದ ಕಾನೂನಿನಂತೆ, ಸಾಕ್ಷ್ಯಗಳನ್ನು ಕರೆದು ಪುರಾವೆ ಪಡೆಯಲು ಅಧಿಕಾರವನ್ನು ಪಡೆದಿದೆ. ಸಮಿತಿಯು ಆದಷ್ಟು ಜಾಗ್ರತೆಯಾಗಿ ತನ್ನ ಕಾರ್ಯವನ್ನು ಪೂರಯಿಸಿ ಸರಕಾರಕ್ಕೆ ತನ್ನ ಶಿಫಾರಸನ್ನು ಪರಿಶೀಲಿಸಿ, ಅದನ್ನು ಜಾರಿಗೆ ತರುವಂತೆ ಆಜ್ಞೆ ಹೊರಡಿಸುವುದು. ಸರಕಾರದ ಆಜ್ಞೆಯು ಕೊನೆಯ ತೀರ್ಮಾನವಾಗಿರುತ್ತದೆ.

ತ್ರಿಪಕ್ಷ ಸಮ್ಮೇಳನದ ನಂತರ ಸರಕಾರವು ನೂತನ ಸಮಿತಿಯನ್ನು ಹೆಚ್ಚು ತಡಮಾಡದೆ ನೇಮಿಸಿರುವುದು ಸ್ವಾಗತಾರ್ಹವಾಗಿದೆ. ಸಮಿತಿಯ ತೀರ್ಮಾನಗಳು ಪತ್ರಿಕೋದ್ಯೋಗಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದೆಂದು ಆಶಿಸುತ್ತೇವೆ.

ಮುಂದಿನ ತಿಂಗಳಲ್ಲಿ ನಡೆಯಲಿರುವ ಇಂಡಿಯನ್ ಈಸ್ಟರ್ನ್ ನ್ಯೂಸ್ ಪೇಪರ್ ಸೊಸೈಟಿ ಸಮ್ಮೇಳನದ ನಿರ್ಧಾರಗಳು ಮತ್ತು ಈ ಬಗ್ಗೆ ಅವರು ತಳೆಯುವ ಧೋರಣೆಯು ಏನೆಂಬುದು ತಿಳಿದೇ ಇದೆ. ಸಮಿತಿಯು ಪತ್ರಿಕಾ ಮಾಲಿಕರ ಒತ್ತಾಯಕ್ಕೆ, ಬೆದರಿಕೆಗೆ ಬಲಿಬೀಳುವುದಿಲ್ಲವೆಂದು ನಂಬುತ್ತೇವೆ. ಸಮಿತಿಯು ಆದಷ್ಟು ಜಾಗ್ರತೆ ತನ್ನ ಕಾರ್ಯವನ್ನು ಮುಗಿಸಿ ಶಿಫಾರಸ್ಸುಗಳನ್ನು ಸರಕಾರಕ್ಕೆ ತಲುಪಿಸುವುದೆಂದು ಆಶಿಸುತ್ತೇವೆ.

ಮುಂಬಯಿ ಮುನಿಸಿಪಲ್ ನೌಕರರ ಮುಷ್ಕರ!

ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್ನಿನ 30,000 ಕಾರ್ಮಿಕರು ಜೂನ್ 14ರಂದು ತಮ್ಮ ವೇತನದಲ್ಲಿ ಐದು ರೂ. ಹೆಚ್ಚಳವಾಗಬೇಕೆಂಬ ಬೇಡಿಕೆಯ ಮೇಲೆ ಮುಷ್ಕರ ಹೂಡಿದ್ದಾರೆ. ಮುಷ್ಕರ ಸಂಪೂರ್ಣವಾಗಿ ಯಶಸ್ವಿಯಾಗಿದ್ದು, ಮುಂಬಯಿ ನಗರ ಜೀವನ ಶಾಂತಗೊಂಡಿದೆ.

ಸೋಷಲಿಸ್ಟ್ ನೇತೃತ್ವದಲ್ಲಿರುವ ಮ್ಯುನ್ಸಿಪಲ್ ಮಜ್ದೂರ್ ಯೂನಿಯನ್‌ನ ಕರೆಯ ಮೇರೆಗೆ ಮುಷ್ಕರ ನಡೆಯುತ್ತಿದೆ. ಮುಷ್ಕರವನ್ನು ತಪ್ಪಿಸಲು ಆಡಳಿತೆಯಲ್ಲಿರುವ ಪಕ್ಷವಾದ ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಮಾಡಿದ ಯತ್ನವು ವಿಫಲಗೊಂಡಿದೆ.

ನೌಕರರ ಸಂಘದ ಬೇಡಿಕೆಯಲ್ಲಿ ಎಲ್ಲರಿಗೂ 5ರೂ ವೇತನದಲ್ಲಿ ಹೆಚ್ಚಳವಾಗಬೇಕೆಂದು. ಆದರೆ ಸಮಿತಿಯವರು ನೌಕರರಿಗೆ ಕೊಡಲು ಮುಂದೆ ಬಂದಿರುವುದು ಸಾಮಾನ್ಯವಾಗಿ 5ರೂ ಹೆಚ್ಚಳ. ಕೆಲಸಗಾರರು ಸಮಿತಿಯ ಈ ಕೊಡುಗೆಯನ್ನು ತಿರಸ್ಕರಿಸಿದ್ದಾರೆ. ನೌಕರರು ಕಾರ್ಪೊರೇಷನ್ ಮುಂದೆ ಇರಿಸಿರುವ ಬೇಡಿಕೆಯನ್ನು ಮಾನ್ಯಮಾಡಿದಲ್ಲಿ 31ಲಕ್ಷ ರೂ. ವೆಚ್ಚವಾಗುತ್ತದೆ, ಸಮಿತಿಯವರು ಕೊಡಲು ಮುಂದೆ ಬಂದಿರುವ ಹಣದ ಮೊತ್ತವೂ ಅಷ್ಟೇ ಆಗುತ್ತದೆ.

ನೀವೇನು ಹೇಳುತ್ತೀರಿ?

(೫ನೇ ಪುಟದಿಂದ)

ಕೂಡಾ ಕೆಂಪು ಬಣ್ಣದಲ್ಲೇ ಸೇರಿಹೋಗಿದ್ದವು.

ಈ ಮಹಾಪರಾಧದತ್ತ ನೇಪಾಳದ ರಾಯಭಾರಿ ಕಛೇರಿಯವರು "ಈಸ್ಟರ್ನ್ ಎಕನಾಮಿಸ್ಟ್"ರವರ ಗಮನ ಸೆಳೆಯಬೇಕಾಗಿತ್ತು. ಆದರೆ ದೆಹಲಿಯಲ್ಲಿರುವ ಅಮೇರಿಕನ್ ರಾಯಭಾರಿ ಕಛೇರಿಯವರು ಈ ಅಕ್ಷಮ್ಯ ಅಪರಾಧದ ಬಗ್ಗೆ ಎಚ್ಚರಿಕೆ ನೀಡಿದರು;

ತಕ್ಷಣವೇ ಚಿತ್ರಕಾರನನ್ನು ಕರೆಸಿ ಅವುಗಳಿಗೆ ಪುನಃ ಬಣ್ಣ ಬಳಿಸಿದ ಮುಖಪುಟಗಳನ್ನು ಹಾಕಲಾಯಿತು.

ಆದರೂ ಕೆಲವು ಪ್ರತಿಗಳು ಪೇಟೆಗೆ ಹೋಗಿಯೇ ಹೋಗಿದ್ದವು!

10,000 ಟನ್ನಿನ

ಚೀನಾದಲ್ಲೇ ದೊಡ್ಡ ಹಡಗು

ಚೀನಾದಲ್ಲೇ ಪ್ರಥಮ ಬಾರಿಯಾಗಿ ಅತ್ಯಂತ ದೊಡ್ಡದಾದ 10,000 ಟನ್ನಿನ ಹಡಗನನ್ನು ಕಟ್ಟುವ ಕಾರ್ಯ ಆರಂಭವಾಗಿದೆ. ಡೈರೇನ್ ಷಿಪ್ ಬಿಲ್ಡಿಂಗ್ ಕಂಪೆನಿಯು ಇದನ್ನು ರಚಿಸುತ್ತಿದೆ.

ಗೊತ್ತು ಮಾಡಿದ ಅವಧಿಗಿಂತ 7 ತಿಂಗಳ ಮೊದಲು ಅಂದರೆ 16 ತಿಂಗಳಲ್ಲೇ ಈ ನಿರ್ಮಾಣ ಕಾರ್ಯವನ್ನು ಮುಗಿಸಬೇಕೆಂದು ಕೆಲಸಗಾರರು ತಾವೇ ಛಲತೊಟ್ಟು ಕಾರ್ಯ ಮಾಡುತ್ತಿರುವರು.

ಸೋವಿಯತ್ ವಿಜ್ಞಾನದ ಅತ್ಯದ್ಭುತ ಮುನ್ನಡೆ

ಕಣ್ಣಾರೆ ಕಂಡು ಅಚ್ಚರಿಪಟ್ಟ ಡಾ॥ ಭಗವಂತಂರವರ ಭಾಷಣ

"ಭಾರತವು ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆಯಬೇಕೆಂದಿದ್ದರೆ ವಿದೇಶೀಯರಿಗಿಂತಲೂ ದೇಶೀಯ ಜನರಿಗೆ ಹೆಚ್ಚು ಅವಕಾಶ, ಪ್ರೋತ್ಸಾಹಗಳನ್ನು ನೀಡುವುದು ಅಗತ್ಯ. ಸೋವಿಯತ್ ದೇಶವು ಇಂದು ಸಾಧಿಸಿರುವ ಅದ್ಭುತ ವೈಜ್ಞಾನಿಕ ಪ್ರಗತಿಗೆ ಇರುವ ಕಾರಣಗಳಲ್ಲಿ ಇದೂ ಒಂದು" ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಡೈರೆಕ್ಟರ್ ಆದ ಡಾ॥ ಭಗವಂತಂರವರು, ಕಳೆದ ವಾರ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ಡಾ॥ ಭಗವಂತಂರವರು ಸೋವಿಯತ್ ರಷ್ಯಾಕ್ಕೆ ಇತ್ತೀಚೆಗೆ ಭೇಟಿಯಿತ್ತ ಭಾರತದ ವೈಜ್ಞಾನಿಕ ಪ್ರತಿನಿಧಿ ಮಂಡಳದ ಸದಸ್ಯರಲ್ಲೊಬ್ಬರಾಗಿದ್ದರು.

"ರಾಷ್ಟ್ರದ ಅಭಿವೃದ್ಧಿಯಲ್ಲಿ ವಿಜ್ಞಾನಕ್ಕಿರುವ ಸ್ಥಾನವನ್ನು ಗಮನಿಸಿ ವಿವಿಧ ಕ್ಷೇತ್ರಗಳಲ್ಲಿ ರಷ್ಯವು ಸಾಧಿಸಿರುವ ಅತ್ಯದ್ಭುತ ಪ್ರಗತಿಯನ್ನು ಕಂಡು ನಾನು ಚಕಿತನಾದೆ. ಇಡೀ ರಾಷ್ಟ್ರವನ್ನೇ ವೈಜ್ಞಾನಿಕವಾದ ಯಾಂತ್ರಿಕ ಹಿನ್ನೆಲೆಯಲ್ಲಿ ಭದ್ರವಾಗಿ ಕಟ್ಟಲಾಗಿದೆ. ವಿದೇಶೀಯ ವಸ್ತು, ಸಾಮಾನು ಸಲಕರಣೆಗಳನ್ನೂ, ತಜ್ಞರನ್ನೂ ಇಟ್ಟುಕೊಳ್ಳದೆ ದೇಶವನ್ನು ಸ್ವಯಂಪೂರ್ಣವಾಗಿಸುವದರಲ್ಲಿ ಅವರಿಗೆ ಬಲವಾದ ನಂಬಿಕೆಯಿದೆ. ರಷ್ಯದ ವೈಜ್ಞಾನಿಕ ವಿಜಯಕ್ಕಿರುವ ಕಾರಣಗಳಲ್ಲಿ ಇದೂ ಒಂದು" ಎಂದು ಡಾ॥ ಭಗವಂತಂರವರು ತಿಳುಹಿಸಿದರು.

ಇದಾವ ಅದ್ಭುತ ?

ಸೋವಿಯತ್ ರಷ್ಯಾದಲ್ಲಿ ಇಂದಿರುವ ವೈಜ್ಞಾನಿಕ ಸಂಸ್ಥೆಗಳ ಹಾಗೂ ವಿಜ್ಞಾನಿಗಳ (ಅಥವಾ ವೈಜ್ಞಾನಿಕ ವಿದ್ಯಾರ್ಥಿಗಳ) ಸಂಖ್ಯೆ ಹೇಗೆ ಬೆಳೆಯಿತೊ ಎಂಬುದಕ್ಕೆ ಸೋಜಿಗಪಟ್ಟ ಡಾ॥ ಭಗವಂತಂ ಹೀಗೆ ಹೇಳಿದರು :

ಸೋವಿಯತ್ ರಷ್ಯದಲ್ಲಿ 1923ರಲ್ಲಿ ಕೇವಲ 1,200 ವೈಜ್ಞಾನಿಕ ಸಂಸ್ಥೆಗಳಿದ್ದರೆ 1955ರ ಹೊತ್ತಿಗೆ 30,000ಕ್ಕೆ ಸಂಖ್ಯೆ ಏರಿತ್ತು. ಮತ್ತು ವೈಜ್ಞಾನಿಕ ಕೆಲಸಗಾರರ ಸಂಖ್ಯೆ ಕೇವಲ ಕೆಲವೇ ಸಹಸ್ರವಿದ್ದರೆ 2,24,000ಕ್ಕೆ ಏರಿತ್ತು. ಹಾಗೂ ಪೋಸ್ಟ್ ಗ್ರ್ಯಾಜ್ಯುಯೇಟ್ ವಿದ್ಯಾರ್ಥಿಗಳ ಸಂಖ್ಯೆ ಕೆಲವೇ ಸಹಸ್ರದಿಂದ 7,500 ಗಳಿಗೆ ಏರಿತ್ತು. ಇದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಆದರೆ ಅವರ ಸಾಧನೆಗಳ ಬಗ್ಗೆ ಎರಡಾಭಿಪ್ರಾಯವಿಲ್ಲವೇ ಇಲ್ಲ; ರಷ್ಯದ ರಾಜಕೀಯ, ಆರ್ಥಿಕ ಪದ್ಧತಿ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ರಷ್ಯನ್ ಜನತೆಯ ಜೀವನ ಮಟ್ಟದಲ್ಲಿ ತೋರಿರುವ ವಿಸ್ಮಯಕಾರಿಯಾದ ಮೇಲ್ಮಟ್ಟವನ್ನು ಗಮನಿಸಬೇಕಾಗಿದೆ.

ಸರ್ವಶಕ್ತಿ ಅಕಾಡಮಿ

ಸೋವಿಯತ್ ರಷ್ಯಾದಲ್ಲಿರುವ ಅಕಾಡಮಿ ಆಫ್ ಸೈನ್ಸ್ ಇದೇ ಸಂಪೂರ್ಣ ಹಾಗೂ ಸರ್ವಶಕ್ತ ಸಂಸ್ಥೆಯಾಗಿದೆ ಎಂದು ತಿಳಿಸಿದ ಡಾ॥ ಭಗವಂತಂರವರು ಮುಂದೊರೆದು ಹೀಗೆ ಹೇಳಿದರು.

ಅಕಾಡಮಿಯ ಅಧ್ಯಕ್ಷರಿಗೆ ಕೇಂದ್ರ ಸಚಿವರ ಮಟ್ಟವಿದೆ. ಇತಿಹಾಸ, ಭಾಷೆಗಳು, ಸಾಹಿತ್ಯ ಇಂಥವುಗಳು ಕೂಡಾ ಈ ಸಂಸ್ಥೆಯ ಶಾಖೆಗಳಿಗೇ ಸೇರಿದವಾಗಿವೆ. ವಿಷಯುಗಳಲ್ಲಿ ವಿಶೇಷ ತಜ್ಞತೆಯನ್ನು ನೀಡುವುದೇ ಈ ಸಂಸ್ಥೆಯ ವೈಶಿಷ್ಟ್ಯವಾಗಿರುವುದನ್ನು ಕಂಡು ನನಗೆ ವಿಸ್ಮಯವೆನಿಸಿತು.

ರಷ್ಯಾದಲ್ಲಿ ಇಂದು 36 ವಿಶ್ವವಿದ್ಯಾನಿಲಯುಗಳಿದ್ದು ಅವುಗಳಲ್ಲಿ ಅತ್ಯಂತ ದೊಡ್ಡದಾಗಿರುವುದು ಮಾಸ್ಕೋವಿನಲ್ಲಿದೆ. ಅಲ್ಲಿ 23,009 ವಿದ್ಯಾರ್ಥಿಗಳು ವಿಶೇಷ ವ್ಯಾಸಂಗದಲ್ಲಿ ತೊಡಗಿದ್ದಾರೆ. ಇವರಲ್ಲಿ 2,000 ಪೋಸ್ಟ್ ಗ್ರ್ಯಾಜ್ಯುಯೇಟ್ ವಿದ್ಯಾರ್ಥಿಗಳಿದ್ದು 12 ಫ್ಯಾಕ್ಟರಿಗಳಲ್ಲಿರುವರು. ಮಾಸ್ಕೋ ವಾಚನಾಲಯದಲ್ಲಿ 5,50,00,00 ಗ್ರಂಥಗಳಿವೆ. ಆದರೆ ಭಾರತದ ಅತ್ಯಂತ ದೊಡ್ಡ ವೈಜ್ಞಾನಿಕ ಸಂಸ್ಥೆಯಲ್ಲಿ 1,50,000 ಗ್ರಂಥಗಳಿವೆ.

ರಷ್ಯಾದಲ್ಲಿ ವಿಜ್ಞಾನಿಗಳು ತಮ್ಮ ಕ್ಷೇತ್ರಗಳಿಂದ ಬೇರೆ ಕ್ಷೇತ್ರಗಳಿಗೆ ಅಲೆದಾಡುವ ಸ್ಥಿತಿಯೇ ಇಲ್ಲ. ಆದರೆ ಭಾರತದಲ್ಲಿ ವಿಜ್ಞಾನಿಗಳೊಬ್ಬರು ಸ್ಟೇಷನ್ ಮಾಸ್ಟರ್‌ರಾಗಿ ಕೆಲಸ ಮಾಡುವುದನ್ನು ಕಂಡಿದ್ದೇನೆ. ಈ ವಿಷಯವನ್ನು ನಾನು ಭಾರತ ಸರಕಾರಕ್ಕೆ ತಿಳುಹಿಸಿದ್ದೇನೆ.

ಸೋವಿಯತ್ ರಷ್ಯಾದಲ್ಲಿ ಗಣಿತಕ್ಕೆ ವಿಶೇಷ ಮಹತ್ವವನ್ನು ಕೊಡಲಾಗಿದೆ. ವಿಶ್ವವಿದ್ಯಾನಿಲಯುಗಳಲ್ಲಿ ಅದಕ್ಕಾಗಿ ವಿಶೇಷ ವಿಭಾಗಗಳೇ ಇವೆ.

ವಿದೇಶಿ ಸಾಹಿತ್ಯ ಪ್ರಕಟಣೆ

ರಷ್ಯಾದಲ್ಲಿ ವಿದೇಶಿ ಸಾಹಿತ್ಯವನ್ನು ಪ್ರಕಟಿಸುವುದಕ್ಕಾಗಿಯೇ ಒಂದು ಸಂಸ್ಥೆಯಿದ್ದು ಈ ಸಂಸ್ಥೆ ಅತ್ಯಂತ ತ್ವರಿತವಾಗಿ, ಸಮರ್ಥ ರೀತಿಯಲ್ಲಿ ಮತ್ತು ಅತ್ಯಂತ ಸಮಂಜಸವಾಗಿ ಭಾಷಾಂತರ ಕಾರ್ಯಗಳನ್ನು ನಡೆಸುತ್ತದೆ. ವಿದೇಶಿ ಭಾಷೆಗಳಲ್ಲಿ ಪ್ರಕಟವಾಗುವ ವೈಜ್ಞಾನಿಕ ವಿಷಯಗಳನ್ನೆಲ್ಲ ಹೀಗೆ ರಷ್ಯನ್ ಭಾಷೆಗೆ ಅನುವಾದಿಸಲಾಗುವುದು. ಆದರೆ ಭಾರತದಲ್ಲಿಂದ ಇಂಗ್ಲೀಷ್ ತೊಲಗಿದರೆ ಹೊರ ಪ್ರಪಂಚದೊಂದಿಗೆ ನಮಗೆ ಹೇಗೆ ಸಂಪರ್ಕ ಉಳಿದೀತು? ಎಂದು ಆಕ್ಷೇಪ ಎತ್ತುವವರು ನಮ್ಮಲ್ಲಿರುವರು. ಈ ಪ್ರಕಟಣ ಮಂದಿರವು ಭಾಷಾಂತರ ಕಾರ್ಯಗಳಲ್ಲೂ ಪುನರ್ ಪ್ರಕಟಣೆಯ ಕಾರ್ಯಗಳಲ್ಲೂ ಅತ್ಯಂತ ಸಮರ್ಥವಾಗಿದೆ. ಇದರಿಂದ ಯಾರು ಬೇಕಾದವರೂ ಪ್ರಯೋಜನಪಡೆಯಬಹುದು ಮತ್ತು ಇಂಗ್ಲೀಷ್ ತನಗೆ ಗೊತ್ತಿಲ್ಲವೆಂದು ದುಃಖಿಸುವುದೂ ಬೇಕಾಗಿಲ್ಲ. ನನ್ನದೇ ಒಂದು ಪುಸ್ತಕವು ಅಲ್ಲಿ ಭಾಷಾಂತರಿಸಲ್ಪಟ್ಟಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಭಾಷೆಯ ಕಾರಣದಿಂದ ಬರುವ ಎಲ್ಲಾ ತೊಂದರೆಗನ್ನೂ ಈ ಸಂಸ್ಥೆಯು ನಿವಾರಿಸಿದೆ.

(೯ನೇ ಪುಟ ನೋಡಿ)

ಸುದ್ದಿ ಸಂಗ್ರಹ

ಮಂಗಳೂರು—

ಯೂತ್ ಲೀಗಿನ ವಾರ್ಷಿಕ ಸಭೆ

ಇದೇ ತಾ. 1—6—58ನೇ ಆದಿತ್ಯವಾರ ಸಂಜೆ ಗಂಟೆ 4ಕ್ಕೆ ಗೋರಿಗುಡ್ಡ ಡೆಮೋಕ್ರಾಟಿಕ್ ಯೂತ್ ಲೀಗಿನ ತೃತೀಯ ವಾರ್ಷಿಕ ಮಹಾಸಭೆಯು ಶ್ರೀ ವಾಮನ ಕೊಡಿಯಾಲ್‌ಬೈಲ್ (ಮುನ್ಸಿಪಲ್ ಕೌನ್ಸಿಲರ್) ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು.

ಸ್ವಾಗತ ಭಾಷಣವಾದ ಬಳಿಕ ಕಾರ್ಯದರ್ಶಿಯವರಿತ್ತ ವರದಿಯನ್ನೂ, ಕೋಶಾಧಿಕಾರಿಗಳಿತ್ತ ಲೆಖ್ಖಪತ್ರವನ್ನೂ ಸಭೆಯು ಸರ್ವಾನುಮತದಿಂದ ಸ್ವೀಕರಿಸಿತು.

ಹೊಸ ವರ್ಷಕ್ಕೆ ಶ್ರೀಗಳಾದ ಕೆ. ಪಿ. ಸಾಲಿಯಾನ್ (ಅಧ್ಯಕ್ಷ), ಕೆ. ರಂಗಪ್ಪ ಸಾಲಿಯಾನ್ (ಉಪಾಧ್ಯಕ್ಷ), ಬಿ. ಬಿ. ನಾಯ್ಕ (ಕಾರ್ಯದರ್ಶಿ), ಜೆ ಶೇಖರ ಬಂಗೇರ (ಉಪಕಾರ್ಯದರ್ಶಿ), ಅಲೆಕ್ಸ್ ಪಿಂಟೊ (ಕೋಶಾಧಿಕಾರಿ), ಜೆ. ಮುತ್ತಪ್ಪ ಕರ್ಕೇರ, ಕೆ. ಸುಂದರ ಬಂಗೇರ ಮತ್ತು ಕೆ. ನಾರಾಯಣ, ಇವರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಸಭಿಕರ ಪರವಾಗಿ ಶ್ರೀಗಳಾದ ಬಿ. ಚಂದ್ರಶೇಖರ, ವೈದ್ಯ ಬಿ. ದಾಸಪ್ಪ ಮತ್ತು ಕೆ. ಪಿ. ಸಾಲಿಯಾನ್ ಇವರು ಭಾಷಣವಿತ್ತರು. ಇವರು ತಮ್ಮ ಭಾಷಣದಲ್ಲಿ ಲೀಗಿನ ಹಿಂದಿನ ಚಟುವಟಿಕೆಗಳನ್ನು ನೆನಪಿಗೆ ತಂದು ಇಂದು ಯುವಕರ ಮುಂದಿರುವ ಜವಾಬ್ದಾರಿ ಹಾಗೂ ಕರ್ತವ್ಯಗಳ ಬಗ್ಗೆ ತಿಳಿಸಿದರು. ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಯುವಕರು ಐಕ್ಯತೆಯಿಂದ ತಮ್ಮ ಪ್ರಾದೇಶಿಕ ಅವಶ್ಯಕತೆಗಳ ಕಡೆಗೆ ಗಮನ ಕೊಟ್ಟು ಜನತೆಯ ಏಳಿಗೆಗಾಗಿ ದುಡಿಯುವುದರೊಂದಿಗೆ ಲೋಕಶಾಂತಿಯೇ ಮೊದಲಾದ, ರಾಷ್ಟ್ರೀಯ ಚಳವಳಗಳಲ್ಲೂ ಭಾಗವಹಿಸಬೇಕೆಂದು ಕೇಳಿಕೊಂಡರು.

ಸಭಾಂತ್ಯದಲ್ಲಿ ಕಂಕನಾಡಿನ ಶ್ರೀ ವಾಗ್ದೇವಿ ಯಕ್ಷಗಾನ ಕಲಾಮಂಡಳಿ ಮತ್ತು ಗೆಳೆಯರಿಂದ ಯಕ್ಷಗಾನ ಜರಗಿತು.

ಕೊನೆಗೆ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಉಡುಪಿ—

ಆಡಳಿತ ಸಮಿತಿ ಸಭೆ

ಉಡುಪಿ ತಾಲೂಕು ನೇಕಾರರ ಸಂಘದ ಆಡಳಿತ ಸಮಿತಿಯ ಸಭೆಯು ತಾರೀಕು 10—6—58ರಂದು ಸಂಘದ ಅಧ್ಯಕ್ಷರಾದ ಇಮ್ಮಾನುವೇಲ್ ಜತ್ತನ್ನರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ವರದಿಯನ್ನು ಕಾರ್ಯದರ್ಶಿಯವರೂ, ಲೆಕ್ಕಪತ್ರವನ್ನು ಖಜಾಂಚಿಯವರೂ ಸಭೆಯ ಮುಂದಿರಿಸಿದಾಗ ಮಂಜೂರು ಆಯಿತು. ಕಳೆದ ಅಕ್ಟೋಬರ್ ತಿಂಗಳಲ್ಲಿ ಹೆಚ್ಚಿನ ಮಜೂರಿ ಮತ್ತು ಇತರ ಬೇಳಿಕೆಗಳಿಗಾಗಿ ನೇಕಾರರು ಮುಷ್ಕರ ಹೂಡಿದ ನಂತರ ಲೇಬರ್ ಆಫೀಸರರು ವಿವಾದದನ್ನು ಟ್ರೈಬ್ಯೂನಲಿಗೆ ಒಪ್ಪಿಸುವ ಭರವಸೆಯಿತ್ತ ಬಳಿಕ ಮುಷ್ಕರ ಹಿಂತೆಗೆದುಕೊಳ್ಳಲ್ಪಟ್ಟಿತು. ಈವರೆಗೂ ವಿವಾದವನ್ನು ಸರಕಾರವು ಟ್ರೈಬ್ಯೂನಲಿಗೆ ಒಪ್ಪಿಸದಿರುವ ಸರಕಾರದ ನೀತಿಯನ್ನು ಖಂಡಿಸಿ ವಿವಾದವನ್ನು ಒಡನೆ ಟ್ರೈಬ್ಯೂನಲಿಗೆ ಹಾಕುವಂತೆ ಸರಕಾರವನ್ನು ಒತ್ತಾಯಿಸಲು ಚಳವಳಿಯನ್ನು ನಡೆಸಲು ತೀರ್ಮಾನಿಸಲಾಯ್ತು.

ಶಿವಮೊಗ್ಗೆ—

ಹೊಟೇಲ್ ಕೆಲಸಗಾರರ ಸಂಘದ ಸ್ಥಾಪನೆ

ಶಿವಮೊಗ್ಗಾ ಹೊಟೇಲ್ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯು ತಾ. 28—5—58ರಂದು ಕರೆಯಲಾಗಿದ್ದು ಹೊಟೇಲುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕುಂದುಕೊರತೆಗಳನ್ನು ಹೊಗಲಾಡಿಸಿಕೊಳ್ಳುವುದಕ್ಕಾಗಿಯೂ, ಸರ್ಕಾರದವರು ಒದಗಿಸಿಕೊಟ್ಟಿರುವ ಸೌಲಭ್ಯಗಳನ್ನು ಹೊಂದುವುದಕ್ಕಾಗಿಯೂ, ಸಂಘವನ್ನು ಸ್ಥಾಪಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸಂಘದ ಪರವಾಗಿ ಕೆಲಸ ಮಾಡಲು, ಶ್ರೀ ಎಸ್. ಎಲ್. ದಾಸಪ್ಪ, ಯಂ. ಲಿಂಗಪ್ಪರವರುಗಳ ಕಾರ್ಯದರ್ಶಿತ್ವದಲ್ಲಿ 12 ಜನ ಸದಸ್ಯರುಗಳನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ವಜಾ ಮಾಡಿದಕ್ಕೆ ಪ್ರತಿಭಟನೆ

ಶಿವಮೊಗ್ಗಾ ಗೋಪಿ ಹೊಟೇಲಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಕೆ. ಕೃಷ್ಣಮೂರ್ತಿಯವರನ್ನು ಸದರಿ ಹೊಟೇಲಿನಿಂದ ವಿನಾ ಕಾರಣ ವಜಾಮಾಡಿಸಿ, ನಿರುದ್ಯೋಗಿಯನ್ನಾಗಿ ಮಾಡಿರುವ ವಿಷಯವಾಗಿ ಕೃಷ್ಣಮೂರ್ತಿಯವರು ಹೊಟೇಲು ಕೆಲಸಗಾರರ ಸಂಘಕ್ಕೂ ಇನ್ಸ್‌ಪೆಕ್ಟರ್ ಆಫ್ ಷಾಪ್ ಎಸ್ಟಾಬ್ಲಿಷ್‌ಮೆಂಟ್, ಶಿವಮೊಗ್ಗಾ ಇವರಿಗೂ ಫಿರ್ಯಾದು ಕೊಟ್ಟಿರುವುದಾಗಿಯೂ ಸದರಿ ಇನ್ಸ್‌ಪೆಕ್ಟರ್‌ರವರು ತನಿಖೆ ನಡೆಸುತ್ತಿರುವುದಾಗಿಯೂ ತಿಳಿದುಬಂದಿದೆ. ಸಂಘವು ಕೆಲಸಗಾರನಿಗೆ ನ್ಯಾಯ ಒದಗಿಸಿಕೊಡಲು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ.

ಕನಿಷ್ಠ ವೇತನಕ್ಕಾಗಿ ಹೋರಾಟ

ಶಿವಮೊಗ್ಗೆಯ ಮೆಸರ್ಸ್ ಸಿ. ಕೆ. ಎಂ. ಎಸ್. ಲಿಮಿಟೆಡ್‌ನವರು ತಮ್ಮ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕೂಡಾ ಕೊಡುತ್ತಿಲ್ಲವೆಂಬ ವಿಷಯವನ್ನು ಶಿವಮೊಗ್ಗೆಯ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅವರ ಗಮನಕ್ಕೆ ತರಲಾಗಿದೆ.

ಈ ಅನ್ಯಾಯವನ್ನು ತಿಳಿದ ಇನ್ಸ್‌ಪೆಕ್ಟರ್‌ರವರು ಶಿವಮೊಗ್ಗೆಯ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್‌ರವರ ಕೋರ್ಟಿನಲ್ಲಿ ಸದರೀ ಮ್ಯಾನೇಜ್‌ಮೆಂಟಿನವರ ವಿರುದ್ಧ ದಾವಾ ಹೂಡಿದ್ದಾರೆ.

ಬೇಲೂರಿನಲ್ಲಿ ರೈತ ಸಂಘ

ಈಗಿನ ಪ್ರಜಾಸರಕಾರದ ಆಡಳಿತದಲ್ಲಿ ಜಾತಿದ್ವೇಷ, ಹೊಟ್ಟೆಕಿಚ್ಚು ಇದೆ ಎಂಬುದಾಗಿಯೂ ಕಾಂಗ್ರೆಸ್ ಸಂಸ್ಥೆಯ ತತ್ವ ಬರಿಯ ವಾದವಾಗಿದೆ ಶಿವಾಯ ಕ್ರಿಯಾತ್ಮಕವಾಗಿಲ್ಲವೆಂದು ಕಾಂಗ್ರೆಸ್ಸಿನವರ ಭಾಷಣದಿಂದಲೇ ಗೊತ್ತಾಗುತ್ತಿದೆ. ಯಾವ ಹಳ್ಳಿಯಲ್ಲಿ ನೋಡಿದರೂ ದ್ವೇಷವ್ಯ ಹೊಟ್ಟೆ ಕಿಚ್ಚು, ಸಂಕುಚಿತ ಮನೋಭಾವನೆ ತುಂಬಿರುತ್ತೆ. ಲಂಚಕೋರತನ ಮಿತಿ ಮೀರಿದೆ. ಶ್ರೀಮಂತರು ಬಡವರನ್ನು ತುಳಿಯುತ್ತಾರೆ. ಶ್ರಮಜೀವಿಗಳಿಗೆ ಸಾಕಾದಷ್ಟು ಪರಿಹಾರ ಸಿಕ್ಕುತ್ತಿಲ್ಲ. ಜಮೀನಿಲ್ಲದ ಬಡವರು ಅರ್ಜಿ ಬರೆದು ತಮಗೆ ಜಮೀನು ಸಿಕ್ಕುತ್ತಿಲ್ಲವೆಂದು ದಣಿಯುತ್ತಾರೆ. ಸರಕಾರಿ ಅಧಿಕಾರಿಗಳು ನಿರಪರಾಧಿಗಳನ್ನು ಹಿಂಸಿಸುತ್ತಾರೆ. ಇದನ್ನು ತಡೆಗಟ್ಟಲು ತಾತ್ಕಾಲಿಕವಾಗಿ ಬೇಲೂರಿನಲ್ಲಿ ತಾಲ್ಲೂಕು ರೈತರ ಸಂಘ ಏರ್ಪಡಿಸಿರುತ್ತೆ. ಪ್ರತಿಯೊಬ್ಬರು ಸದಸ್ಯರಾಗಬೇಕಾಗಿ ತಮ್ಮಲ್ಲಿ ಬೇಡುತ್ತೇನೆ ಎಂದು ಕೆ. ಎಲ್. ಹುಚ್ಚಪ್ಪ, ಹಳೇಬೀಡು ಅವರು ಕೇಳಿಕೊಳ್ಳುತ್ತಾರೆ.

ಬಳ್ಳಾರಿ—

ಮುನಿಸಿಪಲ್ ಕಾರ್ಮಿಕರ ಮುಷ್ಕರ !

ಬಳ್ಳಾರಿ ಮುನಿಸಿಪಲ್ ಕಾರ್ಮಿಕರು ಹಗಲಿರುಳು ಜನತೆಯ ಸೇವೆಯನ್ನು ಮಾಡುತ್ತ ಪಟ್ಟಣದ ಸ್ವಚ್ಛತೆಯನ್ನು ಕಾಪಾಡಲು ಹೆಣಗುತ್ತಿರುವರು. ಆದರೆ ಮುನಿಸಿಪಲ್ ಅಧಿಕಾರಿಗಳು ಅವರ ನ್ಯಾಯವಾದ ಮತ್ತು ಕನಿಷ್ಠವಾದ ಬೇಡಿಕೆಗಳನ್ನು ಮಾನ್ಯ ಮಾಡದಂತೆ ದುರ್ಲಕ್ಷಿಸುತ್ತಿರುವರು. ೧೯೫೨ನೇ ಇಸ್ವಿಯಲ್ಲಿ ಕಾರ್ಮಿಕರು ಹೋರಾಟವನ್ನು ಹೂಡಿ ೧೦ ದಿನಗಳ ವರೆಗೂ ಮುಷ್ಕರ ನಡೆಸಿದ ನಂತರ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಂಡು ಅದರಂತೆ ಹೋದ ವರ್ಷದ ವರೆವಿಗೂ ಅವರಿಗೆ ಸಂಬಳ ಬೋನಸ್ಸು ಕೊಡಲಾಗುತ್ತಿತ್ತು. ಆದರೆ 1951ರಿಂದ ಅವರಿಗೆ ದೊರೆಯಬೇಕಾದ ಮನೆ ಬಾಡಿಗೆ ಅಲೊಯನ್ಸ್, ಯೂನಿಫಾರಂ ಅಲೊಯನ್ಸ್, ಅವರಿಗೆ ಕಾನೂನು ಪ್ರಕಾರ ಬರಬೇಕಾದ ಇನ್‌ಕ್ರಿಮೆಂಟುಗಳು ಕೊಡುತ್ತಿಲ್ಲ. ಪಟ್ಟಣದ ವೈಶಾಲ್ಯ ಜನಸಂಖ್ಯೆ ವಿಪರೀತವಾಗಿ ಬೆಳೆದುಹೋಗುತ್ತಿದೆ. ಆದರೆ ಕಾರ್ಮಿಕರ ಸಂಖ್ಯೆಯಲ್ಲಿ ಯಾವ ವಿಧವಾದ ಬೆಳವಣಿಗೆ ಇಲ್ಲ. ಅದರಿಂದಾಗಿ ಪಟ್ಟಣದ ಸ್ವಚ್ಛತೆ ಕೆಟ್ಟುಹೋಗುತ್ತಿದೆ. ಇದಕ್ಕೆ, ಮುನಿಸಿಪಲ್ ಅಧಿಕಾರಿಗಳೇ ಕಾರಣರಾಗಿದ್ದಾರೆ. ದಿನೇ ದಿನೇ ತಿಂಡಿ ಸಾಮಾಗ್ರಿಗಳ ಬೆಲೆ ಏರುತ್ತಿರುವಾಗ, ಗುತ್ತಿಗೆಗಳ ಭಾರ ಜಾಸ್ತಿ ಆಗುತ್ತಿರುವಾಗ ಮುನಿಸಿಪಲ್ ಅಧಿಕಾರಿಗಳು ಕಾರ್ಮಿಕರ ಸುಲಿಗೆಯನ್ನು ಪ್ರಾರಂಭ ಮಾಡಿರುವರು. ಇಂಥ ಆರ್ಥಿಕ ಪರಿಸ್ಥಿತಿಯಲ್ಲಿ ಸ್ಯಾನಿಟರಿ 'ಇನ್ಸ್‌ಪೆಕ್ಟರ್ಸ್' ಕೆಲವರು ಲಂಚಕೋರತನಕ್ಕೆ ಬಿದ್ದು ಕಾರ್ಮಿಕರನ್ನು ಸುಲಿಗೆ ಮಾಡಲು ಪ್ರಾರಂಭಿಸಿರುವರು.

ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಮುನಿಸಿಪಲ್ ಅಧಿಕಾರಿಗಳ ಮುಂದೆ—ಸರ್ಕಾರದ ಮುಂದೆ ಮಂಡಿಸಿದರು. ಎಲ್ಲರೂ ಮುಖದ ಮೇಲೆ ಕೈ ಆಡಿಸುವ ನಾಟಕವನ್ನು ಆಡುತ್ತಿರುವರು. ಕಾರಣ ಕಾರ್ಮಿಕರು ಗತ್ಯಂತರವಿಲ್ಲದೆ ಈಗ ಮುಷ್ಕರಕ್ಕೆ ಸಿದ್ಧರಾಗಬೇಕಾಗಿದೆ. ಕಾರ್ಮಿಕರು ಇದೇ ಜೂನ್ 15ರಿಂದ ಮುಷ್ಕರವನ್ನು ಹೂಡುವುದಾಗಿ ನೋಟೀಸನ್ನು ಕೊಡಬೇಕಾಗಿದೆ. ನ್ಯಾಯವಾದ ಹೋರಾಟಕ್ಕೆ, ಜನತೆಯ ಬೆಂಬಲವನ್ನು ನೀಡಬೇಕೆಂದು ಮುನಿಸಿಪಲ್ ಅಧಿಕಾರಿಗಳ ಮೇಲೆ ಒತ್ತಾಯ ತಂದು ಈ ಬಿಕ್ಕಟ್ಟನ್ನು ಬಿಡಿಸಬೇಕು ಎಂಬುದಾಗಿ ಬಳ್ಳಾರಿ ಮುನ್ಸಿಪಲ್ ಕಾರ್ಮಿಕರ ಸಂಘವು ಕರೆ ಇತ್ತಿದೆ.

> **ಕಮ್ಯೂನಿಸ್ಟರಿಗೇ ವಿಜಯ**
>
> ಆಲೆಪ್ಪಿಯ ಮೂರು ವಾರ್ಡುಗಳಲ್ಲಿ ಇತ್ತೀಚೆಗೆ ಉಪಚುನಾವಣೆಗಳು ನಡೆದು ಮೂರೂ ಸ್ಥಳಗಳಲ್ಲೂ ಕಮ್ಯೂನಿಸ್ಟ್ ಉಮೇದುವಾರರೇ ವಿಜಯಿಗಳಾಗಿದ್ದಾರೆ. ಟಿ. ವಿ. ರಮೇಶನ್, ಸಿ. ಕೆ. ಕೇಶವನ್ ಮತ್ತು ವಿ. ಕೆ. ಕುಂಜು ಪಣಿಕ್ಕರ್ ಈ ಕಮ್ಯೂನಿಸ್ಟ್ ಉಮೇದುವಾರರು ತಮ್ಮ ಕಾಂಗ್ರೆಸ್ ಸ್ಪರ್ಧಾಳುಗಳನ್ನು ಸೋಲಿಸಿ ಜನಪ್ರತಿನಿಧಿಗಳಾಗಿದ್ದಾರೆ. ಈ ಉಪಚುನಾವಣೆಗಳ ಬಳಿಕ ಆಲೆಪ್ಪಿ ಮುನ್ಸಿಪಾಲ್ಟಿಯಲ್ಲಿ ಸದಸ್ಯ ಬಲ ಹೀಗಿದೆ: ಕಮ್ಯೂನಿಸ್ಟರು 21, ಕಾಂಗ್ರೆಸ್ 12, ಪ್ರಜಾ ಸೋಷಲಿಸ್ಟ್ 2 ಮತ್ತು ಕ್ರಾಂತಿಕಾರಿ ಸೋಷಲಿಸ್ಟ್ 1.

ಕುಣಿಗಲ್—

ಮಕ್ಕಳೂ ಮುಷ್ಕರಕ್ಕೆ ಸಿದ್ಧ !

ಕುಣಿಗಲ್ ಟೌನ್ ಉರ್ದು ಸ್ಕೂಲಿನಲ್ಲಿ ಉಪಾಧ್ಯಾಯಿನಿಯರು ಮಕ್ಕಳಿಗೆ ಸರಿಯಾಗಿ ಪಾಠ ಹೇಳುತ್ತಿಲ್ಲವೆಂಬ ಕಾರಣದಿಂದ ಮಕ್ಕಳು ಮುಷ್ಕರಕ್ಕೆ ಸಿದ್ಧರಾಗಿರುತ್ತಾರೆ. (ಎಂಬ ವರದಿ ನಮಗೆ ಬಂದಿದೆ) ಉಪಾಧ್ಯಾಯಿನಿಯರು ಮಕ್ಕಳಿಗೆ ಪಾಠ ಹೇಳದೆ ತಮ್ಮ ತಮ್ಮ ವ್ಯವಹಾರಗಳಲ್ಲಿ ಮೈಮರೆತು ಮಕ್ಕಳನ್ನು ಉಪಾಧ್ಯಾಯಿನಿಯರ ವಿರುದ್ಧ ಎತ್ತಿಕಟ್ಟುತ್ತಾರೆಂದೂ ತಿಳಿದಿದೆ. ಈ ವಿಷಯ ಪೋಷಕರ, ಊರವರ ಮಾತಾಗಿದ್ದು ಸಂಬಂಧಿಸಿದ ಅಧಿಕಾರಿಗಳು ಸುಮ್ಮನಿರುವುದನ್ನು ಕಂಡು ವಿಸ್ಮಯ ವ್ಯಕ್ತಪಡಿಸಲಾಗಿದೆ. ಮಕ್ಕಳಿಗೆ ವಿದ್ಯೆಬಾರದಿದ್ದರೆ ಹೋಗಲಿ, ಕೆಟ್ಟ ಚಾಳಿಗಳ ಬಳುವಳಿ ಬಾರದಿದ್ದರೆ ಸಾಕು ಎಂದು ಪೋಷಕರು ಹೇಳತೊಡಗಿದ್ದಾರೆ.

ಇದನ್ನು ಪ್ರತಿಭಟಿಸುವದಕ್ಕಾಗಿ ಮಕ್ಕಳ ಮುಷ್ಕರವೇ ಕೊನೆಯ ದಾರಿಯಾಗಿದೆ. ಆಳುವ ಕಾಂಗ್ರೆಸ್ ಸರ್ಕಾರ ಈ ಮುಷ್ಕರವನ್ನು ತಡೆಯಲು ಕ್ರಮತೆಗೆದುಕೊಳ್ಳಬೇಕಾದ ಸೋಜಿಗದ ಸಂಗತಿ ನಡೆದರೆ ಆಶ್ಚರ್ಯವೇನಿಲ್ಲ.

ನೇಪಾಳಕ್ಕೆ ರಷ್ಯದ ಕೊಡುಗೆ

ರಷ್ಯನ್ ಸರ್ಕಾರವು ನೇಪಾಳಕ್ಕೆ 40 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಕಾಣಿಕೆಯಾಗಿ ಕೊಟ್ಟಿದೆ.

ನೇಪಾಳದ ದೊರೆ ಶ್ರೀ ಮಹೇಂದ್ರರು ಇದೀಗ ರಷ್ಯದ ಸಂಚಾರದಲ್ಲಿರುವರು. ಇದೇ ಕಾಲಕ್ಕೆ ನಡೆದ ಶ್ರೀ ಮಹೇಂದ್ರರ ಜನ್ಮದಿನದ ಕುರುಹಾಗಿ ರಷ್ಯನ್ ಸರ್ಕಾರವು ಅವರಿಗೆ ಈ ಕೊಡುಗೆಯನ್ನು ಕೊಟ್ಟಿದೆ.

ನೌಕರಶಾಹಿಯ ಶಾಪ

ಒಂದು ನಿಯಮ: ಅಧಿಕಾರಿಗೆ ತನ್ನ ಕೈಕೆಳಗಿನವರನ್ನು ಹೆಚ್ಚಿಸಿಕೊಳ್ಳುವುದು ಬೇಕು. ಆದರೆ ಅವರು ಪ್ರತಿಸ್ಪರ್ಧಿಗಳಾಗಿರಬಾರದು. ಮತ್ತು ಅಧಿಕಾರಿಗಳು ಪರಸ್ಪರರಿಗಾಗಿ ಕೆಲಸ ಮಾಡುತ್ತಾರೆ. ಇದು ನೌಕರಶಾಹಿಯ ಸ್ವಭಾವಗಳಲ್ಲೊಂದು.

ನಮ್ಮಲ್ಲಿ ಕೆಲಸಕ್ಕಾಗಿ ತಕ್ಕ ನೌಕರರ ವರ್ಗವಿದೆಯೋ ಅಥವಾ ನೌಕರರೇ ಕೆಲಸಗಳನ್ನು (ಮೇಲುಮಟ್ಟದಲ್ಲಿ, ಕೆಳಗಲ್ಲ) ಸೃಷ್ಟಿಸುವರೋ ಹೇಳುವುದು ಕಷ್ಟ. ಯಾವುದೋ ಒಂದು ವಿಷಯಕ್ಕೆ ಸಮಿತಿ ಏರ್ಪಾಡಾಗುತ್ತದೆ. ಆ ಸಮಿತಿಯವರು ಇನ್ನೆರಡೋ, ಮೂರೋ ಉಪಸಮಿತಿಗಳನ್ನು ನಿಯಮಿಸುತ್ತಾರೆ. ಆ ಉಪ ಸಮಿತಿಗಳವರು ಏನೋ ಮಾಡುತ್ತಾರೆ. ಹೀಗೆ ಹನುಮಂತನ ಬಾಲ ಬೆಳೆಯುತ್ತದೆ.

ನೌಕರಶಾಹಿ ಕೊಟ್ಟ ಶಾಪಗಳಲ್ಲಿ ಇದೊಂದು. ಈ ಶಾಪ ತಟ್ಟಿದ ನಮ್ಮ ದೇಶದಲ್ಲಿ ಈ ಬಾಲ ಹೇಗೆ ಬಿಚ್ಚಿದೆ, ಬೆಳೆದಿದೆ ಎಂಬುದಕ್ಕೆ ಪುಟ್ಟ ನಿದರ್ಶನವೊಂದು ಇಲ್ಲಿದೆ ನೋಡಿ —

೧೯೩೭ರಲ್ಲಿ ಬ್ಯೂರೋ ಆಫ್ ಪಬ್ಲಿಕ್ ಇನ್‌ಫರ್ಮೇಷನ್ ಕಛೇರಿಯಲ್ಲಿ ೪ ಜನ ಅಧಿಕಾರಿಗಳು, ೫೭ ಜನ ಗುಮಾಸ್ತ ವರ್ಗದ ಜನಗಳು, ಹೀಗೆ ಒಟ್ಟು ೬೧ ಜನರು ಕೆಲಸ ಮಾಡುತ್ತಿದ್ದರು. (ಇದು ಆ ಮೇಲೆ ಪಬ್ಲಿಕ್ ಇನ್‌ಫರ್ಮೇಷನ್ ಎಂದು ಕರೆಯಲ್ಪಟ್ಟಿತು.)

೧೯೩೭ರಲ್ಲಿ ಡೈರೆಕ್ಟರು ತಮ್ಮ ೩ ಜನ ಅಧಿಕಾರಿಗಳು ಹಾಗೂ ೫೭ ಜನ ಗುಮಾಸ್ತರು ಇವರುಗಳೊಡನೆ ಈ ಕಾರ್ಯಭಾರಗಳನ್ನೆಲ್ಲ ನೆರವೇರಿಸುತ್ತಿದ್ದರು. (1) ಸರಕಾರದ ಎಲ್ಲಾ ಸಚಿವರುಗಳ ಪತ್ರಿಕಾ ಪ್ರಕಟಣೆ ಮತ್ತು ಸಾರ್ವಜನಿಕ ಸಂಬಂಧ ವ್ಯವಹಾರ. (2) ಸರ್ಕಾರದ ಎಲ್ಲಾ ಪ್ರಕಟಣೆಗಳು. (3) ಸರ್ಕಾರದ ಫೋಟೋಗಳು. (4) ಚಲಚ್ಚಿತ್ರಗಳು. (5) ಸಾಗರದಾಚೆಯ ಸಂಬಂಧಗಳು ಮತ್ತು ಪ್ರಚಾರ. (6) ಸಾಂಸ್ಕೃತಿಕ ಸಂಬಂಧಗಳು. (7) ಪ್ರದರ್ಶನಗಳು. (8) ಸರಕಾರದ ಜಾಹೀರಾತುಗಳು. ಇದಕ್ಕೆ ಸಂಬಂಧಿಸಿದ ವೆಚ್ಚ ಸುಮಾರು ೨ ಲಕ್ಷ ರೂಪಾಯಿಗಳಷ್ಟಿತ್ತು.

೧೯೪೦ರಲ್ಲಿ ಬ್ಯೂರೋ ಆಫ್ ಪಬ್ಲಿಕ್ ಇನ್‌ಫರ್ಮೇಷನ್‌ಗೆ ಐ. ಸಿ. ಎಸ್. ನವರು ಡೈರೆಕ್ಟರ್ ಜನರಲ್ ಆಫ್ ಇನ್‌ಫರ್ಮೇಷನ್ ಆಗಿ ಇನ್ನೊಬ್ಬ ಅಧಿಕಾರಿಗಳೆಂದು ಸೇರಿಸಲ್ಪಟ್ಟರು. ಆ ಮೇಲೆ ಈ ಡೈರೆಕ್ಟರ್ ಜನರಲ್‌ರು ಸುದ್ದಿ ಶಾಖಾ ಸಚಿವರಿಗೆ ಕಾರ್ಯದರ್ಶಿಗಳಾಗಿ ನೇಮಕವಾದರು. ಇವರು ತಮ್ಮ ಮಹತ್ವವನ್ನು ಇನ್ನಿಷ್ಟು ತೋರಿಸಿ ಸಂಪರ್ಕ ಶಾಖೆಯಿಂದ ಆಕಾಶವಾಣಿಯು ಈ ಶಾಖೆಗೆ ಬರುವಂತೆ ಮಾಡಿದರು.

ಸರ್ಕಾರದ ಪ್ರಕಟಣಾ ವಿಭಾಗನನ್ನು ನೋಡಿಕೊಳ್ಳುತ್ತಿದ್ದ ಗುಮಾಸ್ತನ ಕಛೇರಿ ಡೈರೆಕ್ಟರ್, ಡೆಪ್ಯೂಟಿ ಡೈರೆಕ್ಟರ್, ಡಿಸ್ಟ್ರಿಬ್ಯೂಷನ್ ಆಫೀಸರ್ ಮತ್ತು ಅಡ್ಮಿನಿಸ್ಟ್ರೇಟಿವ್ ಆಫೀಸರ್ ಇವರುಗಳಿಂದ ಕೂಡಿದ ಪಬ್ಲಿಕೇಷನ್ಸ್ ಡಿವಿಜನ್ ಎಂಬ ದೊಡ್ಡ ವಿಭಾಗವೇ ಆಗಿ ಪ್ರತ್ಯೇಕ ಕಛೇರಿಯಾಯಿತು.

ಫಿಲಂ ಫೈಲುಗಳನ್ನಿಟ್ಟುಕೊಂಡು ವ್ಯವಹರಿಸುತ್ತಿದ್ದ ಗುಮಾಸ್ತನ ಕಛೇರಿ ಫಿಲಂ

ಭಾರತದಲ್ಲಿ ಔದ್ಯೋಗಿಕ ಅಶಾಂತಿ, ಕಲಹಗಳು ದಿನದಿನಕ್ಕೂ ಹೆಚ್ಚುತ್ತಿವೆ

ಭಾರತದಲ್ಲಿ ಔದ್ಯೋಗಿಕ ಕಲಹಗಳು ಹಾಗೂ ಅಶಾಂತಿಗಳು ದಿನದಿನಕ್ಕೂ ಹೆಚ್ಚುತ್ತಿರುವ ಅಂಕಿಸಂಖ್ಯೆಗಳು ಇದೀಗ ದೊರೆತಿವೆ. ಇದನ್ನು ಕಂಡಾಗ ಕಾರ್ಮಿಕವರ್ಗ ಹೆಚ್ಚು ಅಸಂತೃಪ್ತವಾಗುತ್ತಿದ್ದು ಈಗಿನ ವ್ಯವಸ್ಥೆಯ ಮೇಲೆ ಕೆರಳಿ ಮೇಲೇಳುವ ಲಕ್ಷಣಗಳೂ ಕಂಡರೆ ಅಚ್ಚರಿಯಿಲ್ಲ.

ಔದ್ಯೋಗಿಕ ಕಲಹಗಳಿಂದ 1958ರ ಜನವರಿಗಿಂತಲೂ ಫೆಬ್ರವರಿ ತಿಂಗಳಲ್ಲಿ ಮಾನವ ಶ್ರಮದ ದಿನಗಳು ಹೆಚ್ಚು ನಷ್ಟವಾಗಿವೆ. ಮೊದಲನೆಯ ತಿಂಗಳಿಗಿಂತಲೂ 2,92,413 ಹೆಚ್ಚು ಮಾನವ ಶ್ರಮದ ದಿನಗಳು ಫೆಬ್ರವರಿಯಲ್ಲಿ ನಷ್ಟಗೊಂಡಿವೆ.

ಪಶ್ಚಿಮ ಬಂಗಾಲದಲ್ಲಿ ಅತ್ಯಂತ ಹೆಚ್ಚು ದಿನಗಳು (4,97,459) ನಷ್ಟಗೊಂಡಿವೆ, ಮೈಸೂರು (81,003) ಬಿಹಾರ (53,711) ಮತ್ತು ಮದ್ರಾಸು (29,923)ಗಳಲ್ಲಿಹೀಗೆ ದಿನಗಳು ನಷ್ಟವಾಗಿದ್ದು ಹಿಂದಿನ ತಿಂಗಳಿನೊಂದಿಗೆ ತುಲನೆ ಒಬ್ಬ ಅಧಿಕಾರಿಗಳು, ಅಸಿಸ್ಟೆಂಟ್ ಪ್ರೊಡ್ಯೂಸರ್, ಅಡ್ಮಿನಿಸ್ಟ್ರೇಟಿವ್ ಆಫೀಸರ್, ಮಾಡಿದಾಗ ಪಶ್ಚಿಮ ಬಂಗಾಲ, ಅಸ್ಸಾಮ್, ಮದ್ರಾಸ್, ಬಿಹಾರ್, ಉತ್ತರ ಪ್ರದೇಶ, ಕೇರಳ ಮತ್ತು ತ್ರಿಪುರಗಳಲ್ಲಿ ಹೆಚ್ಚಾಗಿದ್ದು ಇನ್ನುಳಿದ ಪ್ರದೇಶಗಳಲ್ಲಿ ಈ ಪ್ರಮಾಣ ಇಳಿಮುಖವಾಗಿದೆ.

ಮಾರ್ಚ್ ತಿಂಗಳಲ್ಲಿ 22 ಲಾಕ್ ಔಟ್‌ಗಳನ್ನೊಳಗೊಂಡು ಒಟ್ಟು 148 ಔದ್ಯೋಗಿಕ ಕಲಹಗಲ ಸಂಖ್ಯೆಗೇರುವ ಹೊಚ್ಚ ಹೊಸ 117 ಔದ್ಯೋಗಿಕ ಕಲಹಗಳು ದಾಖಲಾಗಿದ್ದವು.

ತಿಂಗಳ ಕಾಲಾವಧಿಯಲ್ಲಿ—"ರಚನಾತ್ಮಕ" ಕಾರ್ಯಗಳಲ್ಲಿ 2,70,500; "ತಯಾರಿಕೆ"ಗಳಲ್ಲಿ 3,61,734; "ಗಣಿ" ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ 66,482; ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ 12,006 ಮಾನವ ಶ್ರಮದ ದಿನಗಳು ನಷ್ಟದ ಮಟ್ಟಕ್ಕೇರಿವೆ.

ತಯಾರಿಕಾ ಗುಂಪಿನಲ್ಲಿ ಔದ್ಯೋಗಿಕ ಅಶಾಂತಿಯ ರೇಷೆಯು ಬಿಂದು ಹಿಂದಿನ ತಿಂಗಳ 77ರಿಂದ ಮಾರ್ಚ್‌ನಲ್ಲಿ 105ಕ್ಕೇರಿದೆ.

——

ಕೇರಳದಲ್ಲಿ.....

ಬೆಳೆ ಹೆಚ್ಚಳಕ್ಕೆ ಅತ್ಯಂತ ನೂತನ ಪ್ರಯೋಗ

ಕೇರಳದ ವಿಸ್ತಾರಕ್ಕಿಂತ ಜನ ಸಂಖ್ಯೆಯ ಗಾತ್ರ ಹೆಚ್ಚಿನದು ಅಂತೆಯೇ ಆಹಾರ ಸಮಸ್ಯೆ ಅಲ್ಲಿ ಬೇರೆಲ್ಲ ಪ್ರಾಂತಗಳಿಗಿಂತಲೂ ಕಷ್ಟಕರವಾದುದು. ಹೊಟ್ಟೆ ಬಟ್ಟೆಯ ಪ್ರಶ್ನೆಯನ್ನು ಸರಿಯಾಗಿ ಬಿಡಿಸಲು ಅಸಮರ್ಥವಾಗಿ ಹೋದ ಕಾಂಗ್ರೆಸ್ ಹಾಗೂ ಸೋಷಲಿಸ್ಟ್ ಸರಕಾರಗಳನ್ನು ಜನ ಕೆಳಗಿಳಿಸಿ ಕೊನೆಗೆ ನಿಜವಾದ ಸಮತಾವಾದಿ ನೋಡಿ ಕಮ್ಯೂನಿಸ್ಟ್ ನಾಯಕತ್ವವನ್ನು ಆಯ್ದುಕೊಂಡಿತು, ಅವರಲ್ಲಿ ವಿಶ್ವಾಸ ತೋರಿಸಿತು.

ಜನರ ವಿಶ್ವಾಸಕ್ಕೆ ತಕ್ಕಂತೆ ಅಲ್ಲಿಯ ಕಮ್ಯೂನಿಸ್ಟ್ ಸರ್ಕಾರ ಇದೀಗ ಕಾರ್ಯ ಮಾಡುತ್ತಿದೆ. ಅಂತೆಯೇ ಅವರ ಅನ್ನದ ಸಮಸ್ಯೆಯನ್ನು ಬಿಡಿಸಲು, ಅಲ್ಪ ಭೂಮಿಯಲ್ಲಿ ಅಧಿಕ ಆಹಾರವನ್ನು ಬೆಳೆಸಲು ಸರ್ಕಾರ ನಾನಾ ಯೋಜನೆಗಳನ್ನು ಸಿದ್ಧಗೊಳಿಸಿ ಕಾರ್ಯಗತವಾಗಿಸಿದೆ. ಅವುಗಳಲ್ಲೊಂದು ವರುಷದಲ್ಲಿ ಮೂರು ಬೆಳೆಗಳನ್ನು ತೆಗೆದುಕೊಳ್ಳುವದಾಗಿದೆ.

ಸರಕಾರದ ದಿಟ್ಟಯೋಜನೆಯಲ್ಲಿ ಪಾಲ್‌ಘಾಟ್ ಜಿಲ್ಲೆಯ ಮಾಳಂಪುಳ ಪ್ರದೇಶದ ಯೋಜನೆಯೊಂದಾಗಿದೆ. ಅಕ್ಕಿ ಅತ್ಯಂತ ಅಗತ್ಯವಾಗಿರವ ಈ ಪ್ರದೇಶದಲ್ಲಿ ಈಗ ಬತ್ತದ ಬೆಳೆ ವರುಷದಲ್ಲಿ ಎರಡು ಸಲ ಮಾತ್ರ ಬರುತ್ತದೆ. ರೈತಾಪಿ ವರ್ಗದ ತುಂಬ ಸಹಕಾರದಿಂದ ಈ ಪ್ರದೇಶದಲ್ಲಿ ಮೂರು ಬೆಳೆಗಳನ್ನು ತೆಗೆಯುವ ಪ್ರಯತ್ನ ನಡೆದಿದೆ. ಮಾಳಂಪುಳ ಯೋಜನೆಯ ಆಯಕಟ್ಟಿನ 47,600 ಎಕರೆ ಪ್ರದೇಶದಲ್ಲಿ ಮೂರು ವಿಭಾಗಗಳನ್ನು ಮಾಡಲಾಗಿದೆ. ಪ್ರತಿ ಒಂದೊದು ಭಾಗದಲ್ಲೂ ಸರದಿಯಂತೆ ಬತ್ತದ ಕೃಷಿಗೆ ತೊಡಗಲಾಗುವುದು. ಸರದಿಯಂತೆ ಪ್ರತಿಯೊಂದು ವಿಭಾಗವೂ ವರುಷದಲ್ಲಿ ಮೂರನೆಯ ಬೆಳೆಯನ್ನು ಕೊಡುತ್ತದೆ. ಈ ಮೂರು ಬೆಳೆಗಳನ್ನು ಅಣೆಕಟ್ಟಿನಲ್ಲಿ ದೊರೆಯುವ ನೀರು ಹಾಗೂ ಮುಂಗಾರುಮಳೆ ಇವುಗಳಿಗೆ ಹೊಂದಿಸಿಕೊಂಡು ಬೆಳೆಯಲಾಗುವುದು.

ಬಡರೋಗಿಗಳಿಗೆ ಆರ್ಥಿಕ ಸಹಾಯ

ಕೇರಳದ ಸರ್ಕಾರ ಇನ್ನೊಂದು ಯೋಜನೆಯನ್ನು ಸಿದ್ಧಪಡಿಸಿದೆ. ಆ ಯೋಜನೆಯ ಹೆಸರು "ಕೇರಳದ ಆರೋಗ್ಯ ಸಚಿವರ ಕಲ್ಯಾಣ ನಿಧಿ". ಈ ನಿಧಿಯನ್ನು ಬಡರೋಗಿಗಳ ಇಲ್ಲವೆ ಅವರನ್ನು ಅವಲಂಬಿರುಸಿವ ಕುಟುಂಬಗಳಿಗೆ ನೆರವು ನೀಡಲು ಉಪಯೋಗಿಸಲಾಗುವುದು

ಈ ನಿಧಿಯನ್ನು ಸ್ವಯಂಪ್ರೇರಿತ ದಾನಗಳಿಂದ, ಕಾಣಿಕೆ–ಕೊಡುಗೆಗಳಿಂದ, ಸರಕಾರದ ಗ್ರಾಂಟ್ಸ್‌ಗಳಿಂದ ಸಂಗ್ರಹಿಸಲಾಗುವದಲ್ಲದೆ ಶೇ. 50ರಷ್ಟನ್ನು ದಾನದ ಪೆಟ್ಟಿಗೆಗಳಿಂದ ಶೇಖರಿಸಲಾಗುವುದು. ಈ ಪೆಟ್ಟಿಗೆಗಳನ್ನು ಆಸ್ಪತ್ರೆಗಳಲ್ಲಿಟ್ಟು ಪ್ರತಿ ತಿಂಗಳೂ ನಿಧಿಗೆ ಅದರಲ್ಲಿಯ ಹಣವನ್ನು ಸೇರಿಸಲಾಗುವುದು. ವರುಷದಲ್ಲಿ ಒಂದು ದಿನ ಅಂದರೆ ಪ್ರಪಂಚ ಆರೋಗ್ಯ ದಿನಾಚರಣೆ (ಎಪ್ರಿಲ್ 7)ಯಂದು ಈ ನಿಧಿಗೆ ವಿಶೇಷ ಹಣವನ್ನು ಸಂಗ್ರಹಿಸಲಾಗುವುದು.

ಈ ಹಣವನ್ನು ಬಡರೋಗಿಗಳ ಕಲ್ಯಾಣಕ್ಕಾಗಿ, ಅಥವಾ ಅವರನ್ನೇ ಅವಲಂಬಿಸಿರುವ ಮನೆಯವರೆಗಾಗಿ, ಅವರ ಸ್ಥಿತಿ ಉತ್ತಮಗೊಳ್ಳುವಂತಾಗುವ ವರೆಗೆ ಅಂದರೆ ಎರಡು ವರುಷಗಳ ವರೆಗಾದರೂ ಇದರಲ್ಲಿಯ ಹಣವನ್ನು ಸಹಾಯಕ್ಕೆ ಕೊಡಲಾಗುವುದು.

ರೆವಿನ್ಯೂ ಮತ್ತು ಮೆಡಿಕಲ್ ಆಫೀಸರುಗಳಿಂದ "ನಿಜವಾದ ರೋಗಿಗಳು" ಎಂಬ ಪತ್ರವನ್ನು ಪಡೆದವರಿಗೆ ಮಾತ್ರ ಈ ನಿಧಿಯ ಸಹಾಯವು ದೊರೆಯುತ್ತದೆ.

ಈ ನಿಧಿಯ ವ್ಯವಸ್ಥೆಯನ್ನು ಐದು ಜನ ಸದಸ್ಯರ ಸಮಿತಿಯೊಂದು ನೋಡಿಕೊಳ್ಳುತ್ತದೆ. ಆರೋಗ್ಯ ಸಚಿವರು ಈ ಸಮಿತಿಯ ಅಡ್ಮಿನಿಸ್ಟ್ರೇಟರ್‌ರಾಗಿಯೂ ಹಣಕಾಸಿನ ಶಾಖೆಯ ಕಾರ್ಯದರ್ಶಿ ಖಜಾಂಚಿಗಳಾಗಿಯೂ ಇರುತ್ತಾರೆ.

ಸ್ ಡಿವಿಜನ್ ಆಗಿ ಚೀಫ್ ಪ್ರೊಡ್ಯೂಸರ್, (ಸಾಕ್ಷಿ ಚಿತ್ರಗಳ) ಚಿತ್ರ ಹಂಚಿಕೆಗಾಗಿ ಇಬ್ಬರು ಸೀನಿಯರ್ ಡೈರೆಕ್ಟರುಗಳು, ಐದಕ್ಕೂ ಕಡಮೆಯಿಲ್ಲದ ಡೆಪ್ಯೂಟಿ ಡೈರೆಕ್ಟರುಗಳು, ಏಳು ಜನ ಕೆಮರಾ ಮೆನ್‌ಗಳು ಪ್ರಧಾನ ರೆಕಾರ್ಡಿಸ್ಟ್, ಪ್ರೊಡಕ್ಷನ್ ಮ್ಯಾನೇಜರ್, ಅಸಿಸ್ಟೆಂಟ್ ಅಕೌಂಟ್ಸ್ ಆಫೀಸರ್, ಇಷ್ಟು ಜನ ನೌಕರರನ್ನು ಹೊಂದಿತ್ತು.

ಯುದ್ಧಪೂರ್ವದಲ್ಲಿ ಸರಕಾರದ ಜಾಹೀರಾತು ವಿಭಾಗವನ್ನು ನೋಡಿಕೊಳ್ಳುತ್ತಿದ್ದ ಗುಮಾಸ್ತ ಅಡ್ವರ್ಟೈಸಿಂಗ್ ಕನ್ಸಲ್ಟಂಟ್ಸ್ ಶಾಖಾಧಿಕಾರಿಯಾಗಿ ಸಿಮ್ಲಾಕ್ಕೆ ಕಳುಹಿಸಲ್ಪಟ್ಟ. ಸಿಮ್ಲಾದ ಆರೋಗ್ಯಕಾರಿಯಾದ ಹವಾಮಾನದಲ್ಲಿ ಮೂವರು ವಿಭಾಗಧಿಕಾರಿಗಳೊಡನೆ ಅಡ್ವರ್ಟೈಸಿಂಗ್ ಕನ್ಸಲ್ಟಂಟ್‌ರ ಕಛೇರಿ ದೊಡ್ಡದಾಗಿ ಅರಳಿತು.

ಬ್ಯೂರೋ ಆಫ್ ಪಬ್ಲಿಕ್ ಇನ್‌ಫರ್ಮೇಷನ್ ಹೀಗೆ ಉಬ್ಬಿಕೊಂಡು ಇಂದು ಪ್ರೆಸ್ ಇನ್‌ಫರ್ಮೇಷನ್ ಬ್ಯೂರೋ ಎಂಬ ಗಂಭೀರವಾದ ಹೆಸರಿನಲ್ಲಿ ಕರೆಯಲ್ಪಡುತ್ತಿದೆ. ಇದನ್ನು ಈಗ ಪರಿಶೀಲಿಸಿದರೆ ಕಾಣುವದೇನು ಗೊತ್ತೆ? 1937ರ ನಾಲ್ಕು ಜನ ಅಧಿಕಾರಿಗಳಲ್ಲದೆ ಒಬ್ಬ ಪ್ರಿನ್ಸಿಪಲ್ ಇನ್‌ಫರ್ಮೇಷನ್ ಅಧಿಕಾರಿಗಳು, ಅವರಿಗೆ ನಾಲ್ವರು ಡೆಪ್ಯೂಟಿ ಪ್ರಿನ್ಸಿಪಲ್ ಇನ್‌ಫರ್ಮೇಷನ್ ಆಫೀಸರುಗಳು, 14 ಜನ ಇನ್‌ಫರ್ಮೇಷನ್ ಅಧಿಕಾರಿಗಳು, ಒಬ್ಬ ಪ್ರೆಸ್ ಫೆಸಿಲಿಟೀಸ್ ಅಧಿಕಾರಿ, ಒಬ್ಬ ಕ್ಯಾಂಪೇನ್ ಆಫೀಸರ್, ಒಬ್ಬ ಆಫೀಸರ್ ಇನ್‌ಚಾರ್ಜ್, ಫೋಟೋ ಸ್ಟುಡಿಯೊ, 6 ಜನ ಸೆಕ್ಷನ್ ಆಫೀಸರುಗಳು, ಒಬ್ಬ ಅಡ್ಮಿನಿಸ್ಟ್ರೇಟಿವ್ ಆಫೀಸರ್, 12 ಜನ ಅಸಿಸ್ಟೆಂಟ್ ಇನ್‌ಫರ್ಮೇಷನ್ ಆಫೀಸರುಗಳು ಮತ್ತು 3 ಜನ ಫೋಟೋಗ್ರಾಫರುಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದೇ ಬಗೆಯ ಅಧಿಕಾರಿಗಳನ್ನು ಹೊಂದಿರುವ

(೯ನೇ ಪುಟ ನೋಡಿ)

ಬಾಗಲಕೋಟೆ—

ಸಿಮೆಂಟ ಕೆಲಸಗಾರರೊಬ್ಬರ ಅನ್ನ ಸತ್ಯಾಗ್ರಹ!

ಬಾಗಲಕೋಟ ಸಿಮೆಂಟ ಕಾರ್ಖಾನೆಯಲ್ಲಿ ಕಳೆದ 4 ವರ್ಷಗಳಿಂದ ಕ್ರಶರ ಮೆಶಿನ ಡ್ರೈವರನಾಗಿ ಕಾಯಂ ಕೆಲಸ ಮಾಡುತ್ತಿರುವ ಮಹಮ್ಮದ ಗೌಸ ಎಂಬವರನ್ನು ಕಂಪೆನಿಯವರು ಸುಳ್ಳು ಆರೋಪ ಹೊರಿಸಿ ತಾ. 9—5—58ರಂದು ಸಸ್ಪೆಂಡ ಮಾಡಿರುವರು. ಇದೇ ರೀತಿ ಹಲವಾರು ಕಾಯಂ ಕೆಲಸಗಾರರನ್ನು ಮೊದಲು ಸಸ್ಪೆಂಡ ಮಾಡಿ ಕೆಲವು ದಿವಸಗಳ ನಂತರ ಕೆಲಸದಿಂದ ತೆಗೆದುಹಾಕಿರುವರು. ತನ್ನನ್ನು ಸಸ್ಪೆಂಡ್ ಮಾಡಿದ್ದು ಅನ್ಯಾಯದ್ದೆಂದೂ, ಕೂಡಲೇ ತನ್ನನ್ನು ನೌಕರಿ ಮೇಲೆ ತೆಗೆದುಕೊಳ್ಳಬೇಕೆಂದೂ ಶ್ರೀ ಗೌಸರು ಕಂಪೆನಿಯವರಿಗೆ ತಿಳಿಸಿರುವರು, ಇದರಂತೆಯೇ ಜಿಲ್ಲಾ ಲೇಬರ ಆಫೀಸರ ಮತ್ತು ಎಸಿಸ್ಟಂಟ ಲೇಬರ ಕಮಿಶನರಿಗೂ ತಿಳಿಸಿರುವರು. ಆದರೆ ಇದರ ಕುರಿತು ಒಂದು ತಿಂಗಳ ಮೇಲಾದರೂ ಯಾರೂ ಯೋಗ್ಯ ವಿಚಾರ ಮಾಡದಿರುವುದರಿಂದ ನ್ಯಾಯ ಪಡೆಯುವುದರ ಸಲುವಾಗಿ ತಾ 23-6-58 ಸೋಮವಾರದಿಂದ ಕಾರ್ಖಾನೆಯ ಗೇಟಿನೆದುರಿಗೆ ಅನ್ನ ಸತ್ಯಾಗ್ರಹ ಮಾಡಬೇಕೆಂದು ಗೌಸರು ನಿರ್ಣಯಿಸಿದ್ದು, ಈ ವಿಷಯವನ್ನು ಕಂಪೆನಿಯವರಿಗೂ ಮತ್ತು ಸಂಬಂಧಪಟ್ಟ ಅಧಿಕಾರಿ ಜನರಿಗೂ ತಿಳಿಸಿರುವರು. ಇವರು ಒಂದು ಜಾಹೀರ ಪ್ರಕಟನೆತೆಗೆದು, ತಮ್ಮ ಮತ್ತು ಇತರ ಕೆಲಸಗಾರರ ಮೇಲಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸುವುದರ ಸಲುವಾಗಿ ತಾವು ಅನ್ನ ಸತ್ಯಾಗ್ರಹ ಮಾಡುವುದಾಗಿಯೂ, ಆದ ಕಾರಣ ಎಲ್ಲಾ ಪಕ್ಷದವರೂ ಮತ್ತು ಸಾರ್ವಜನಿಕರೂ ಬೆಂಬಲ ಕೊಡಬೇಕೆಂದೂ ವಿನಂತಿ ಮಾಡಿಕೊಂಡಿರುವರು.

ಬಾಗಲಕೋಟ ಸಿಮೆಂಟ ಕಂಪೆನಿ ಕೆಲಸಗಾರ ಸಂಘದವರು ಶ್ರೀ ಗೌಸರಿಗೆ ಸಂಪೂರ್ಣ ಬೆಂಬಲ ಕೊಟ್ಟಿರುವರು. ಬಾಗಲಕೋಟ ಸಿಮೆಂಟ ಕಾರ್ಖಾನೆ ಪ್ರಾರಂಭವಾಗಿ ಹಲವಾರು ವರ್ಷಗಳಾದರೂ ಕೂಡಾ, ಅದರಲ್ಲಿ ದುಡಿಯುತ್ತಿರುವ ಸಾಧಾರಣ 1,300 ಕೆಲಸಗಾರರಿಗೆ ಯಾವದೇ ತರದ ಸವಲತ್ತುಗಳು ಇನ್ನೂ ಸಿಗುತ್ತಿಲ್ಲ. ಇದರ ಪೈಕಿ 200 ಕೆಲಸಗಾರರಷ್ಟೆ ಕಾಯಂ ನೌಕರಿಯಲ್ಲಿದ್ದು, ಇವರಿಗೂ ನೌಕರಿಯ ಭರವಸೆಯಿಲ್ಲ. ಬಾಕಿ ಜನರೆಲ್ಲ ಕ್ಯಾಜುವಲ ಮತ್ತು ಎಕ್‌ಸ್ಟ್ರಾ ಕ್ಯಾಜುವಲ ಅಂತಾ ದಿನ ಕೂಲಿಗಳಾಗಿ ಕೆಲಸ ಮಾಡುತ್ತಿರುವರು. ಇವರಿಗೆಲ್ಲ ಯೋಗ್ಯ ಪಗಾರವಿಲ್ಲ; ರಜೆ ಜವರ ಕಾಯಂ ಅಲಾವನ್ಸ ಮತ್ತು ಫ್ಯಾಕ್ಟರಿ ಆಕ್ಟಿನ ಪ್ರಕಾರ ಇತರ ಸವಲತ್ತುಗಳಿಲ್ಲ. ಕಂಪೆನಿಯವರಿನ್ನೂ ಸ್ಟ್ಯಾಂಡಿಂಗ ಆರ್ಡರನ್ನು ತಯಾರಿಸಲಿಲ್ಲ ಮತ್ತು ವರ್ಕ್ಸ್ ಕಮಿಟಿಗಳಿಗಾಗಿ ಚುನಾವಣೆ ಮಾಡುತ್ತಿಲ್ಲ. 1956ರಲ್ಲಿ ಕೆಲಸಗಾರರೆಲ್ಲ ಸಂಘ ಮಾಡಿ ತಮ್ಮ ಬೇಡಿಕೆಗಳನ್ನು ಕಂಪೆನಿಯ ಮುಂದಿಟ್ಟಾಗ, ಅವರು ಕೆಲಸಗಾರರ ಮೇಲೆ ದಬ್ಬಾಳಿಕೆ ಮಾಡಿ, ಸಂಘದ ಕಾರ್ಯಕರ್ತರನ್ನೆಲ್ಲ ನೌಕರಿಯಿಂದ ತೆಗೆದದ್ದಲ್ಲದೆ, ಸಾಧಾರಣ 400 ದಿನ ಕೆಲಸಗಾರರನ್ನು ತೆಗೆದುಹಾಕಿದ್ದರು. ಸರಕಾರದವರು 90 ಜನರ ಮೇಲೆ ಮತ್ತು ಸಂಘದ ಮುಖಂಡರ ಮೇಲೆ ಖಟ್ಲೆ ಹಾಕಿದ್ದು, ಇನ್ನೂ ಆ ಖಟ್ಲೆಗಳು ನಿಕಾಲೆಯಾಗಲಿಲ್ಲ.

ಕೆಲಸಗಾರರಿಗೆ ಬೇಡಿಕೆ ಮಂಜೂರ ಮಾಡದಿರುವದಷ್ಟೇ ಅಲ್ಲ, ಹೆಚ್ಚು ದಿವಸ ಕೆಲಸಗಾರರು ಸರ್ವಿಸಿನೊಳಗಿದ್ದರೆ ಅವರಿಗೆ ಸವಲತ್ತು ಕೊಡಬೇಕಾದೀತೆಂಬ ಅಂಜಿಕೆಯಿಂದ, ಕಂಪೆನಿಯವರು 3 ತಿಂಗಳಿಗೊಮ್ಮೆ ಕೆಲಸಗಾರರನ್ನು ಸುಳ್ಳು ನೆಪ ಹಚ್ಚಿ ನೌಕರಿಯಿಂದ ತೆಗೆಯುತ್ತಿರುವರು. ಕೆಲವು ದಿವಸಗಳ ನಂತರ ಅವರನ್ನೇ ಮತ್ತೆ ಹೊಸತಾಗಿ ನೇಮಿಸಿಕೊಳ್ಳುತ್ತಿರುವರು.

ಅಸಿಸ್ಟೆಂಟ ಲೇಬರ ಕಮಿಶನರ ಮತ್ತು ಲೇಬರ ಆಫೀಸರರಿಗೆ ಅರ್ಜಿ ಮಾಡಿಕೊಂಡರೆ ಅವರು "ಚೌಕಾಶಿ ಮಾಡಲಾಗಿ ನಿಮ್ಮನ್ನು ಕೆಟ್ಟ ನಡತೆಯ ಸಲುವಾಗಿ" ನೌಕರಿಯಿಂದ ತೆಗೆದುಹಾಕಿದೆಂದು ತಿಳಿದುಬರುತ್ತದೆ" ಎಂದು ಗಿಳಿಪಾಠದ ಉತ್ತರವನ್ನು ಎಲ್ಲಾ ಕೆಲಸಗಾರರಿಗೆ ಕಳುಹಿಸುತ್ತಿರುವರು.

ಈ ಸಿಮೆಂಟ ಕಾರ್ಖಾನೆಯಲ್ಲಿ ಸರಕಾರದ ಬಂಡವಾಳವೂ ಇದ್ದು, ಟೆಂಡೂಲಕರ ಪ್ರೈವೇಟ ಏಜನ್ಸೀಸ ಎಂಬವರು ಇದರ ಮೇನೇಜಿಂಗ ಏಜಂಟರಾಗಿರುವರು. ಡಾ। ಟೆಂಡೂಲಕರರು ಕೆಲಸಗಾರರ ಮೇಲೆ ದಬ್ಬಾಳಿಕೆ ಮಾಡುವುದಷ್ಟೇ ಅಲ್ಲದೆ, ಕಂಪೆನಿಯ ಆಡಳಿತೆ ಸರಿಯಾಗಿ ನಡೆಸದೆ, ಹಣದ ದುರುಪಯೋಗ ಮಾಡಿ ಬಹಳ ಹಾನಿಯನ್ನುಂಟುಮಾಡುತ್ತಿರುವರು

ನಮ್ಮ ದೇಶದ ಬೆಳವಣಿಗೆಗೆ ಸಿಮೆಂಟ ಅತಿ ಮುಖ್ಯವಾಗಿದ್ದು, ಈ ಕೈಗಾರಿಕೆಯಲ್ಲಾಗುತ್ತಿರುವ ದುರಾಡಳಿತೆ, ಅಪವ್ಯಯ, ಮತ್ತು ಕೆಲಸಗಾರರ ಮೇಲಾಗುತ್ತಿರುವ ಅನ್ಯಾಯ, ಅತ್ಯಾಚಾರಗಳನ್ನು ವಿಚಾರಿಸಲು, ಸಮತಾವಾದವನ್ನು ರಚಿಸಲು ಹೊರಟಿರುವ ಕಾಂಗ್ರೆಸ ಸರಕಾರ ತಯಾರಿಲ್ಲ. ಇದರಿಂದ ದೇಶದ ಔದ್ಯೋಗಿಕ ಬೆಳವಣಿಗೆಗೆ ಬಹಳ ಹಾನಿಯಾಗುತ್ತಿದೆ. ಸರಕಾರದವರು, ಅದರಲ್ಲೂ ಹೊಸತಾಗಿ ನೇಮಿಸಲ್ಪಟ್ಟ ಕೂಲಿಗಾರ ಮಂತ್ರಿಗಳು, ಬಾಗಲಕೋಟ ಸಿಮೆಂಟ ಕಾರ್ಖಾನೆಯ ಆಡಳಿತೆ ಮತ್ತು ಅಲ್ಲಿ ದುಡಿಯುತ್ತಿರುವ ಕೆಲಸಗಾರರ ಪರಿಸ್ಥಿತಿಯ ಕುರಿತು ಕೂಡಲೇ ವಿಚಾರಣೆ ನಡೆಸಬೇಕು. ಇಲ್ಲವಾದರೆ ಪರಿಸ್ಥಿತಿ ಗಂಭೀರವಾಗುವುದರಲ್ಲಿ ಸಂಶಯವಿಲ್ಲ.

ನೌಕರಶಾಹಿಯ ಶಾಪ

(೧ನೇ ಪುಟದಿಂದ)

ಶಾಖೆಗಳು ಬೊಂಬಾಯಿ, ಕಲ್ಕತ್ತ ಮತ್ತು ಮದ್ರಾಸುಗಳಲ್ಲಿವೆ. ಸಾಲದ್ದಕ್ಕೆ ಸಂರಕ್ಷಣಾ ಶಾಖೆ ಪ್ರತ್ಯೇಕ ಇನ್‌ಫರ್ಮೇಶನ್ ಕಛೇರಿಯನ್ನು ಹೊಂದಿದೆ.

ಹೀಗೆ ಸರಕಾರದ ನೌಕರವರ್ಗ ಬೆಳೆಯುತ್ತಿದೆ. ಒಂದಕ್ಕೆ ಹತ್ತಾಗಿ ಸಸಿ ಬಿಡುವ ಬಾಳೆಯ ಜಾತಿಗೆ ಸೇರಿದ ವ್ಯವಸ್ಥೆಯೊಂದು ನಮ್ಮಲ್ಲಿ ಸರಕಾರವಾಗಿದೆ!
['ಈಸ್ಟರ್ನ್ ಎಕನಾಮಿಸ್ಟ್' ಆಧಾರ.]

ಬೆಂಗಳೂರು—

ಹಂಚಿನ ಮಜೂರರ ಸತ್ಯಾಗ್ರಹ ಅಂತ್ಯ

ಬೆಂಗಳೂರಿನ ಯಶವಂತಪುರದಲ್ಲಿರುವ ಫೈರ್ ಬ್ರಿಕ್ಸ್ ಮತ್ತು ಪಾಟರೀಸ್ ಮಾಲಿಕರು ಅನ್ಯಾಯವಾಗಿ ಕಾರ್ಖಾನೆಯನ್ನ ಲಾಕ್ ಔಟ್ ಮಾಡಿದ್ದುದರ ವಿರುದ್ಧ ಕಳೆದ 52 ದಿನಗಳಿಂದ ಕೆಲಸಗಾರರು ನಡೆಸುತ್ತಿದ್ದ ಸತ್ಯಾಗ್ರಹ ಹೋರಾಟವು ಜೂನ 17ರಂದು ಅಂತ್ಯವಾಯಿತು.

ಮಾಲಿಕರು ಜೂನ್ 23ರಿಂದ ಕಾರ್ಖಾನೆಯನ್ನು ತೆರೆಯುವ ಹಾಗೂ, ಎಲ್ಲ ಕೆಲಸಗಾರರನ್ನೂ ನಿಶ್ಶರ್ತವಾಗಿ ಕೆಲಸಕ್ಕೆ ತೆಗೆದುಕೊಳ್ಳುವುದಾಗಿಯೂ, ನಂತರ ವಿವಾದವನ್ನು ಪರಿಶೀಲಿಸುವುದಾಗಿಯೂ ನೌಕರರ ಸಂಘದವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ.

ರಾಯಚೂರು—

ಹಟ್ಟಿ ಚಿನ್ನದ ಗಣಿ ಕಾರ್ಮಿಕರು ಮುಷ್ಕರದ ಹಾದಿಯಲ್ಲಿ

ಹಟ್ಟಿ ಚಿನ್ನದ ಗಣಿ ಕೆಲಸಗಾರರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳಲು ಮುಷ್ಕರ ನಡೆಸಲು ಮತವಿತ್ತಿದ್ದಾರೆ. 9—6—58ರಂದು ನಡೆದ ಮುಷ್ಕರ ಮತದಾನದಲ್ಲಿ 1,180 ಕೆಲಸಗಾರರು ಮುಷ್ಕರದ ಪರವಾಗಿಯೂ 39 ಮಂದಿ ವಿರೋಧವಾಗಿಯೂ ಮತವಿತ್ತಿದ್ದಾರೆ. ಒಟ್ಟು ಕೆಲಸಗಾರರ ಸಂಖ್ಯೆ 1,600. 'ಸಂದೇಶ್' ಉರ್ದು ಪತ್ರಿಕೆಯ ಸಂಪಾದಕರಾದ ಎಂ. ಎ. ರಹೀಂರವರು ಮುಷ್ಕರದ ಮತದಾನ ನಡೆಸಿದರು. ನೌಕರರ ಸಂಘವು ಮ್ಯಾನೇಜ್‌ಮೆಂಟಿಗೆ ಮತದಾನದ ಫಲಿತಾಂಶವನ್ನು ತಿಳಿಸಿದೆ. ಮುಷ್ಕರ ನಡೆಸಲು ಸಿದ್ಧತೆ ನಡೆಯುತ್ತಿದೆ.

ಬೇಕು

"ಜನಶಕ್ತಿ"ಯ ನೀತಿ-ಧ್ಯೇಯಗಳಿಗೊಪ್ಪುವ ಕಲಾತ್ಮಕವಾದ ಸಣ್ಣ ಕತೆಗಳಿಗೆ 'ಜನಶಕ್ತಿ' ಸ್ವಾಗತ ನೀಡುತ್ತದೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಕತೆಗಳು ಒಂದು ಪುಟಕ್ಕೆ ಜಾಸ್ತಿಯಾಗಿರಬಾರದು. ಅಚ್ಚುಕಟ್ಟಾಗಿ ಒಂದೇ ಮಗ್ಗುಲಿಗೆ ಬರೆದಿರಬೇಕು. ಅನುವಾದಿತ ಕತೆಗಳಾಗಿದ್ದರೆ ಮೂಲವನ್ನು ಸ್ಪಷ್ಟವಾಗಿ ತಿಳಿಹಿಸಿರಬೇಕು.

ಕಮ್ಯೂನಿಸ್ಟರು ಅಧಿಕಾರಕ್ಕೆ ಬರುವದನ್ನು ಯಾರೂ ತಡೆಯರು!

ಕೇರಳದ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಮುಂದಿನ ಚುನಾವಣೆಯ ಕಾಲಕ್ಕೆ ಆಂಧ್ರ ಮತ್ತು ಬಂಗಾಲಗಳಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬರಬಹುದು ಎಂದು ಹೇಳಿರುವುದು ಬೇಕಾದಷ್ಟು ಚರ್ಚೆಗೆ ಅವಕಾಶ ನೀಡಿದೆ. "ಸಾಧ್ಯವಿಲ್ಲ"! ಎಂದವರೂ ಎಷ್ಟೋ ಜನರು.

ಆಂಧ್ರದ ಸೋಶಲಿಸ್ಟ್ ನಾಯಕ ಪಿ. ವಿ. ಜಿ. ರಾಜು ಅವರು 'ಬೆಂಗಳೂರಿನ ದಿನಪತ್ರಿಕೆಯ ವರದಿಗಾರರೊಡನೆ ಮಾತನಾಡುತ್ತಿದ್ದಾಗ ಶ್ರೀ ಇ. ಎಂ. ಎಸ್.ರ ಹೇಳಿಕೆಯ ಕಡೆಗೆ ಗಮನ ಸೆಳೆದಾಗ ಕೆಳಗಿನಂತೆ ಉತ್ತರಿಸಿದರು.

"ಆಂಧ್ರದಲ್ಲಿ ಕಮ್ಯೂನಿಸ್ಟರು ಪ್ರಬಲರಾಗುತ್ತಿರುವುದೇನೋ ನಿಜ. ಇದಕ್ಕೆ ಕಾರಣಗಳು ಎರಡು. ಒಂದು ಸಮತಾವಾದಿ ಶಕ್ತಿಗಳು ಸಂಘಟನೆಯಾಗಲು ಅಸಮರ್ಥವಾಗಿರುವುದು; ಮತ್ತೊಂದು ಕಾಂಗ್ರೆಸ್ ಸರಕಾರದ ದಕ್ಷಹೀನ ಆಡಳಿತ...... ಈಗಿನ ಪರಿಸ್ಥಿತಿಯು ಕಮ್ಯೂನಿಸ್ಟರನ್ನು ಅಧಿಕಾರಕ್ಕೆ ತರುವುದೋ ಇಲ್ಲವೋ ಎಂಬುದನ್ನು ಹೇಳಲು ನನಗೆ ಸಾಧ್ಯವಿಲ್ಲ. ಒಂದು ವೇಳೆ ಅಧಿಕಾರಕ್ಕೆ ಬಂದರೂ ಅದು ಚುನಾವಣೆಯ ಮೂಲಕ ಆಗುವುದರಿಂದ ತಡೆಯಲು ಸಾಧ್ಯವಾಗುವುದಿಲ್ಲ."

ಸೋವಿಯತ್ ವಿಜ್ಞಾನದ ಅತ್ಯದ್ಭುತ ಮುನ್ನಡೆ

(೧ನೇ ಪುಟದಿಂದ)

ವೈಜ್ಞಾನಿಕ ಸಲಕರಣೆಗಳ ತಯಾರಿಕೆಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಅಲ್ಲಿ ಪ್ರತ್ಯೇಕ ಸಚಿವ ಶಾಖೆಯೊಂದಿದೆ. ಪ್ರಯೋಗಾಲಯಗಳಲ್ಲಿ ವೈಜ್ಞಾನಿಕ ಸಲಕರಣೆಗಳು ಪರಿಪೂರ್ಣವಾಗಿದ್ದು ಅವೆಲ್ಲ ರಷ್ಯದ ತಯಾರಿಕೆಗಳೇ ಆಗಿವೆ. ಹೆಚ್ಚು ಸಂಖ್ಯೆಯಲ್ಲಿ ವಿಜ್ಞಾನಿಗಳನ್ನು ತಯಾರಿಸಿ ದೇಶದ ಕಲ್ಯಾಣಕ್ಕೆ ವಿಜ್ಞಾನವನ್ನು ದುಡಿಸಿಕೊಳ್ಳುವ ಕಾರ್ಯಕ್ಕಾಗಿ ಎಲ್ಲಾ ಬಗೆಯ ಹೊಣೆಗಳನ್ನು ಹೊತ್ತಿರುವ ಸಚಿವ ಶಾಖೆಯಿರುವುದೇ ರಷ್ಯದ ಮುನ್ನಡೆಗೆ ಕಾರಣವಾಗಿದೆ.

ವಿಜ್ಞಾನಿಗಳ ನಗರ!

ರಷ್ಯವು ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಧೀರವಾದ ಹೆಜ್ಜೆಯೊಂದನ್ನಿಡುತ್ತಿದೆ. ಸೈಬೇರಿಯಾದಲ್ಲಿ ವಿಜ್ಞಾನಿಗಳ ನಗರವನ್ನೇ ನಿರ್ಮಿಸುವ ಯೋಚನೆ ಅದಕ್ಕಿದೆ. 4,000 ಹಿರಿಯ ವಿಜ್ಞಾನಿಗಳಿರುವ ಒಟ್ಟು 20,000 ಜನ ವಿಜ್ಞಾನಿಗಳು ಈ ನಗರದಲ್ಲಿ ನೆಲೆಸಲಿರುವರು. ಸೈಬೀರಿಯಾವನ್ನು ಒಂದು ದೊಡ್ಡ ವೈಜ್ಞಾನಿಕ ಶಿಕ್ಷಣದ ಕೇಂದ್ರವಾಗಿಸಬೇಕೆಂಬುದೇ ರಷ್ಯದ ಉದ್ದೇಶವಾಗಿದೆ. ಆ ಪ್ರದೇಶದಲ್ಲಿ ಹುದುಗಿರುವ ಅಗಣಿತ ಖನಿಜ ಸಂಪತ್ತನ್ನು ಶೋಧಿಸಬೇಕೆಂಬುದು ರಷ್ಯದ ಉದ್ದೇಶವಾಗಿರುವುದರಲ್ಲಿ ಸಂದೇಹವಿಲ್ಲ, ಅವರು ಯಶಸ್ವಿಗಳಾಗುವುದರಲ್ಲೂ ಸಂದೇಹವಿಲ್ಲ.!!

ಎಂದು ಡಾ॥ ಭಗವಂತಂರವರು ಮುಗಿಸಿದರು.

ಹುರಿಗಾಳು

ಧೇಬರ್ ಬುದ್ಧಿವಂತಿಕೆ

ಕಮ್ಯೂನಿಸ್ಟರು ಉತ್ತಮವಾದ ಸಂಘಟನೆ ಹೊಂದಿರುವುದರಿಂದಲೇ ಅವರ ಪ್ರಾಬಲ್ಯ ಹೆಚ್ಚುತ್ತಿರುವುದು. ಅವರ ರಾಜಕೀಯ ಧೋರಣೆಯು ಉತ್ತಮವಾಗಿದೆ ಎನ್ನುವುದರಿಂದಲ್ಲ. ಕೆಳಗಿನಿಂದ ಮೇಲಿನವರೆಗೆ ಸಂಘಟನೆಯನ್ನು ವ್ಯವಸ್ಥೆ ಮಾಡಿಕೊಂಡಿದ್ದಾರೆ-ಎಂದು ಧೇಬರ್‌ವರು ಕಾಂಗ್ರೆಸ್ಸಿನಲ್ಲಿ ಶಿಸ್ತು ಮತ್ತು ಸಂಘಟನೆಯನ್ನು ಉದ್ಧಾರ ಮಾಡಲು ಹೇಳಿಕೆಯಿತ್ತಿದ್ದಾರೆ.

ಹೀಗೆ ಹೇಳುವುದರಿಂದ ಕಾಂಗ್ರೆಸ್ಸಿಗರಲ್ಲಿ ಬುದ್ಧಿ ಮೂಡಿಸಬಹುದು ಎಂದು ಅವರು ಭಾವಿಸಿದ್ದಾರೆ. ಕಾಂಗ್ರೆಸ್ಸಿನಲ್ಲಿ ಇಂದು ತಲೆದೋರಿರುವ ಬಿಕ್ಕಟ್ಟು ಏಕೆ ಎಂಬಂಶವನ್ನು ಮುಚ್ಚಿಟ್ಟು, ಕಮ್ಯೂನಿಸ್ಟರನ್ನು ತಪ್ಪಾದ ರೀತಿಯಲ್ಲಿ ಉದಹರಿಸಿದ್ದಾರೆ, ಧೇಬರ್ ಬುದ್ಧಿವಂತಿಕೆಯಿಂದ.

ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಅಲ್ಲೋಲಕಲ್ಲೋಲ ಅವರ ನೀತಿಯಿಂದಾಗಿ. ಕಮ್ಯೂನಿಸ್ಟ್ ಪಕ್ಷ ಇಂದು ಜನಪ್ರಿಯವಾಗುತ್ತಿರುವುದಕ್ಕೆ ಕಾರಣ ಅದರ ಧೋರಣೆಗಳಿಂದಾಗಿ. ಸರಿಯಾದ ಧೋರಣೆ, ಸಿದ್ಧಾಂತವಿಲ್ಲದೆ ಯಾವ ಪಕ್ಷದಲ್ಲೂ ಶಿಸ್ತು ಮೂಡಲು ಸಾಧ್ಯವಿಲ್ಲ. ಇದು ಧೇಬರರಿಗೆ ನಾವು ತಿಳಿಸಿಹೇಳಬೇಕಿದೆ. ಕಾಂಗ್ರೆಸ್ಸಿನ ರೋಗವನ್ನು ಗುಣಪಡಿಸಲು ಧೇಬರ್‌ರವರ ಕ್ರಮ ಕುದುರೆಗೆ ಮುಂದೆ ಗಾಡಿ ನಿಲ್ಲಿಸುವುದು ಎಂಬ ನಾಣ್ಣುಡಿಯಂತಾಗಿದೆ.

ಮುಖ್ಯಮಂತ್ರಿ ಬೇರೆ? ಜತ್ತಿ ಬೇರೆ?

ರಾಜ್ಯದ ಭೂಸುಧಾರಣೆಗಳ ಬಗ್ಗೆ ಮಾತನಾಡುತ್ತ ಮುಖ್ಯಮಂತ್ರಿ ಜತ್ತಿಯವರು ಭೂಸುಧಾರಣ ಸಮಿತಿಯ ಅಧ್ಯಕ್ಷನಾಗಿ ನಾನು ನನ್ನ ಸ್ವಂತ ಅಭಿಪ್ರಾಯವನ್ನು ಅಲ್ಲಿ ವ್ಯಕ್ತಗೊಳಿಸಿದ್ದೇನೆ. ಈಗ ಅದನ್ನು ಜಾರಿಗೆ ತರುವುದು ಬಿಡುವುದು ಸರಕಾರದ, ಶಾಸನಸಭಾ ಸದಸ್ಯರ ಜವಾಬುದಾರಿ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ತಾವೇ ತಯಾರಿಸಿದ ವರದಿಯನ್ನು ಈಗ ಅಧಿಕಾರಕ್ಕೆ ಬಂದನಂತರ ಮುಖ್ಯಮಂತ್ರಿ ಬೇರೆ, ಭೂಸುಧಾರಣಾ ಸಮಿತಿಯ ಅಧ್ಯಕ್ಷರು ಬೇರೆ ಎಂದು ಹೇಳಿದ ಹಾಗಾಯಿತು. ಇದು ನಿಜಾಂಶವಾಗಿದ್ದರೆ ರೈತಜನರು ಯಾವ ಜತ್ತಿಯವರನ್ನು ನಂಬಬೇಕು?

ಅಧಿಕಾರಕ್ಕೆ ಬಂದರೆ ಎಲ್ಲರೂ ಮರೆಯುವುದೆಂದು ಹೇಳುವ ವಾಡಿಕೆಯಿದೆ. ಜತ್ತಿಯವರೂ ಅದರಲ್ಲಿ ಒಬ್ಬ ಸದಸ್ಯರಾಗಿರಬಹುದು.

ಎಂ.ಪಿ.ಸಿ.ಸಿ.—ಜತ್ತಿ

ಜತ್ತಿ ಮಂತ್ರಿಮಂಡಲ ತಮ್ಮ ಭವಿಷ್ಯವನ್ನು ಕಂಡುಕೊಳ್ಳಲು ಮುಂಬರುವ ಎಂ. ಪಿ. ಸಿ. ಸಿ. ಚುನಾವಣೆ ಎದುರು ನೋಡುತ್ತಿದೆ. ಮುಂದೆ ಅಧ್ಯಕ್ಷರು ಯಾರಾಗುವರು ಎಂಬುದೇ ಅವರ ಚಿಂತೆಯಾಗಿದೆ. ಸಾಹುಕಾರರು ಮತ್ತೆ ಬಾರದಂತೆ ಯತ್ನಿಸಲಾಗುತ್ತಿದೆ, ಇವು ಕೇಳಿಬರುತ್ತಿರುವ ಸುದ್ದಿಗಳು.

ಸುದ್ದಿ ಕೇಳುತ್ತಿರುವ ಜನ ಯಾರು ಬಂದರೇನು ಯಾರು ಹೋದರೇನು ಬಡ ಬೋರೇ ಗೌಡನು ರಾಗೀ ಬೀಸುವುದು ತಪ್ಪಲಿಲ್ಲ ಎನ್ನುತ್ತಿದ್ದಾರೆ.

ಆದರೆ ಕಾಂಗ್ರೆಸ್ ಶಾಸನ ಸಭಾ ಸದಸ್ಯರಿಗೆ ಮಾತ್ರ ಅದು ಬೇರೆ. ಯಾರು ಮಂತ್ರಿಯಾದರೇನು ಅವರನ್ನು ಉರುಳಿ ತಪ್ಪಿಸುವುದಿಲ್ಲ ಎಂಬುದೇ ಅವರ ನಿತ್ಯ ರಾಗವಾಗಿದೆ.

—"ಚಾಣಕ್ಯ"

ಜನಯುಗ

(ಕನ್ನಡ ಮಾಸ ಪತ್ರಿಕೆ)

ಆಗಸ್ಟ್ ತಿಂಗಳ ಆರಂಭದಿಂದ **"ಜನಯುಗ"** ನೂತನ ಕನ್ನಡ ಮಾಸ ಪತ್ರಿಕೆಯೊಂದನ್ನು ಕನ್ನಡ ಜನತೆಗೆ ಕಾಣಿಕೆ ಈಯಲು ನಿಶ್ಚಯಿಸಿದ್ದೇವೆ.

ಕನ್ನಡ ಮಾಸ ಪತ್ರಿಕೆಯ ಬಣದಲ್ಲಿ **"ಜನಯುಗ"** ನಾಡಏಳಿಗೆಗಾಗಿ, ಜನತೆಯಲ್ಲಿ ಜಾಗೃತಿ ಉಂಟುಮಾಡಲು ಸೇವೆ ಸಲ್ಲಿಸಲಿದೆ. ಮನರಂಜನೆಯನ್ನೊದಗಿಸುವುದಷ್ಟೇ ಅಲ್ಲದೆ, **"ಜನಯುಗ"** ಕನ್ನಡ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಷಯಗಳನ್ನು ಕುರಿತು ವಿಚಾರ ಪೂರ್ಣ ಲೇಖನಗಳನ್ನು ಒಳಗೊಂಡಿರುವುದು. ಮಾರ್ಕ್ಸ್‌ವಾದದ ಮೂಲ ಸಿದ್ಧಾಂತ, ಭಾರತ ಕಮ್ಯೂನಿಸ್ಟ್ ಪಾರ್ಟಿಯ ಧೋರಣೆ, ಸಮಾಜವಾದೀ ಜಗತ್ತಿನ ಮುನ್ನಡೆ ಇತ್ಯಾದಿಗಳ ಬಗ್ಗೆಯೂ ವಿಶೇಷ ಲೇಖನಗಳನ್ನು ಪ್ರಕಟಿಸಲಾಗುವುದು.

ಕ್ವಾರ್ಟರ್ ಕ್ರೌನ್ ಆಕಾರದ **"ಜನಯುಗ"** ನಾಲ್ವತ್ತು ಪುಟಗಳನ್ನು ಹೊತ್ತು, ಆಕರ್ಷಕ ರಕ್ಷಾಕವಚವನ್ನು ಹೊಂದಿರುವುದು.

ಬೆಲೆ ಕೇವಲ **ನಾಲ್ಕಾಣೆ** ಅಥವಾ **ಇಪ್ಪತ್ತೈದು ನಯಾಪೈಸೆ.**

ವಾರ್ಷಿಕ ಚಂದಾ **ಮೂರು ರೂಪಾಯಿ** ಮಾತ್ರ.

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಹೊಸದಾಗಿ ಕಾಲಿರಿಸುತ್ತಿರುವ "ಜನಯುಗ"ಕ್ಕೆ ಕನ್ನಡನಾಡಿನ ಜನರು ಚಂದಾದಾರರಾಗುವುದರ ಮೂಲಕ, ಪತ್ರಿಕೆಯ ಪ್ರತಿಗಳನ್ನು ಹೆಚ್ಚಾಗಿ ಮಾರಾಟ ಮಾಡುವುದರ ಮೂಲಕ, ಎಲ್ಲ ಪ್ರೋತ್ಸಾಹ ಮತ್ತು ಬೆಂಬಲವನ್ನಿತ್ತು, ಈ ಕಾರ್ಯದಲ್ಲಿ ನಮಗೆ ನೆರವೀಯಬೇಕೆಂದು ನಮ್ರವಾಗಿ ವಿನಂತಿಸುತ್ತೇವೆ.

ಸಂಪಾದಕ,
"ಜನಯುಗ"

ವಿವರಗಳಿಗೆ ಕೂಡಲೇ ಬರೆಯಿರಿ:—

ಮ್ಯಾನೇಜರ್,
"ಜನಯುಗ" (ಕನ್ನಡ ಮಾಸಪತ್ರಿಕೆ)
L-59, ಕಾಶೀ ವಿಶ್ವೇಶ್ವರ ಗುಡಿ ರಸ್ತೆ, ಸುಲ್ತಾನ್‌ಪೇಟೆ,
ಬೆಂಗಳೂರು 2

ಮಂಗಳೂರು ಮುನಿಸಿಪಲ್ ಕೌನ್ಸಿಲ್ ಸಭೆಯಿಂದ

ಕಾಂಗ್ರೆಸ್ ಸದಸ್ಯರ ಪಲಾಯನ !

ಕಳೆದ ತಾ. 13 ರಂದು ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಜರಗಿತು. ಚೆಯರ್ಮೇನರೂ ವೈಸ್ ಚೆಯರ್ಮೇನರೂ ಈ ಸಭೆಗೆ ಗೈರು ಹಾಜರಾದುದರಿಂದ ಶ್ರೀ ಮಚಾಡೊ (ಕಾಂಗ್ರೆಸ್) ರವರ ಸೂಚನೆಯಂತೆ ಶ್ರೀ ವಿಶ್ವನಾಥ ಕಾಮತರು ಸಭೆಯ ಅಧ್ಯಕ್ಷತೆ ವಹಿಸಿಕೊಂಡರು.

ಈ ಸಭೆಯಲ್ಲಿ ವಾಡಿಕೆಯಂತೆ ಬಹುಮಂದಿ ಕಾಂಗ್ರೆಸ್ ಸದಸ್ಯರು ಗೈರುಹಾಜರಿದ್ದರು. ಒಟ್ಟು 7 ಮಂದಿ ಕಾಂಗ್ರೆಸ್ ಸದಸ್ಯರೂ ಕಾಂಗ್ರೆಸೇತರ 10 ಮಂದಿ ಸದಸ್ಯರೂ ಸಭೆಯಲ್ಲಿ ಹಾಜರಿದ್ದರು.

ಸಭೆಯ ಕಾರ್ಯಕ್ರಮ ಆರಂಭವಾಗಿ ಸಭೆಯ ಕಾರ್ಯ ಕಲಾಪಗಳಲ್ಲಿ ಪ್ರತಿಪಕ್ಷದ ಸದಸ್ಯರುಗಳೇ ಆದ ಶ್ರೀ ಶಾಂತಾರಾಂ ಪೈ, ಶ್ರೀ ಮೋನಪ್ಪಶೆಟ್ಟಿ, ಶ್ರೀ ವಾಮನ ಕೊಡಿಯಾಲಬೈಲ್ ಮತ್ತು ಡಾ॥ ಎಂ. ಸಿ. ಶಾಸ್ತ್ರಿ ಇವರೇ ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ಕಂಡು ಇನ್ನು ಕಾರ್ಯಕಲಾಪಗಳಲ್ಲಿ ತಮ್ಮ ಪೀಕಲಾಟ ನಡೆಯದೆಂದೂ, ವಿಷಯಗಳೆಲ್ಲ ನ್ಯಾಯವಾಗಿಯೇ ತೀರ್ಮಾನವಾಗಬಹುದೆಂದೂ ಕಾಂಗ್ರೆಸ್ ಸದಸ್ಯರೆಲ್ಲ ಹೆದರಿದರು. ತಮ್ಮ ಪರಂಪರೆ ಪೂರ್ವಾಲೋಚನೆಗಳಂತೆ ಪ್ರಜಾಪ್ರಭುತ್ವ ಕ್ರಮವನ್ನು ಅಲ್ಲಗೆಳೆದು, ತಾವೇ ಸೂಚಿಸಿದ ಅಧ್ಯಕ್ಷರಿಗೆ ಅವಮಾನ ಮಾಡಿ ಸಭೆಯಲ್ಲಿ ಕೋರಂ ಇಲ್ಲದಂತೆ ಮಾಡಲು ಒಬ್ಬೊಬ್ಬರೇ ಕಾಂಗ್ರೆಸ್ ಸದಸ್ಯರು (ಅಧ್ಯಕ್ಷರಿಂದ ಬಂದ ಕಾಫಿಗಾಗಿ ಕಾದುಕುಳಿತು, ಕಾಫಿ ಕುಡಿದೊಡನೆ) ಕಾಲಿಗೆ "ಬುದ್ಧಿದಾನ" ಮಾಡತೊಡಗಿದರು. ಕಾಂಗ್ರೆಸ್ ಕೌನ್ಸಿಲರುಗಳ ನೀತಿಯನ್ನು ಪ್ರತಿಭಟಿಸುತ್ತಾ, ಶ್ರೀ ಎ. ಶಾಂತರಾಮ ಪೈಯವರು 'ಇದು ಮುನಿಸಿಪಾಲಿಟಿಗೂ ಅವರನ್ನು ಆರಿಸಿದ ಜನತೆಗೂ ಮಾಡುವ ಅಪಮಾನವಾಗಿದೆ. ಮಾತ್ರವಲ್ಲ ಇಂದು ಅಧ್ಯಕ್ಷತೆ ವಹಿಸಿದ ಶ್ರೀ ಕಾಮತರಿಗೆ ಕಾಂಗ್ರೆಸಿಗರೇ ಅಗೌರವ ತೋರಿಸಿದಂತಾಗಿದೆ. ಅದುದರಿಂದ ಈ 'ಪಲಾಯನ'ವನ್ನು 'ಸಭಾತ್ಯಾಗ'ವೆಂದು ಸಭಾಧ್ಯಕ್ಷರು ಬರೆದುಕೊಳ್ಳಬೇಕೆಂದು ಸೂಚಿಸಿದರು.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 Phone: 3810